Be Internet Awesome. Google

# ಜಾಣತನ
# ಎಚ್ಚರಿಕೆ
# ಸದೃಢತೆ
# ಕರುಣೆ
# ಧೈರ್ಯ

ಕುಟುಂಬ ಮಾರ್ಗಸೂಚಿ



# Be Internet Awesome.

ಪ್ರಿಯ ಪೋಷಕರೇ,

Be Internet Awesome ಕರಿಕ್ಯುಲಮ್ ಅನ್ನು ನಾವು ಮೊತ್ತಮೊದಲಿಗೆ ಶಿಕ್ಷಕರಿಗಾಗಿ ರಚಿಸಿದೆವು. ಇಂದಿನ ತರಗತಿಯಲ್ಲಿ ಡಿಜಿಟಲ್ ಸುರಕ್ಷತೆ ಮತ್ತು ನಾಗರಿಕತೆಯ ಕುರಿತಾದ ಕಲಿಕೆಯು ಒಂದು ನಿರ್ಣಾಯಕ ಘಟಕವಾಗಿದೆ, ಆದರೆ ಯಾವುದೇ ಮಗುವಿನ ಕಲಿಕೆಯಲ್ಲಿ ಮನೆಯು ಮುಖ್ಯ ಪಾತ್ರ ವಹಿಸುತ್ತದೆ ಮತ್ತು ಉತ್ತಮ ಆನ್‌ಲೈನ್ ಅಭ್ಯಾಸಗಳ ವಿಷಯದಲ್ಲೂ ಈ ಮಾತು ಸತ್ಯವಾಗಿದೆ.

ತಂತ್ರಜ್ಞಾನವು ವೇಗವಾಗಿ ಬೆಳೆಯುತ್ತದೆ ಮತ್ತು ಅಭಿವೃದ್ಧಿಯ ಪಥದಲ್ಲಿ ಮುಂಚೂಣಿಯಲ್ಲಿರುವುದು ಸವಾಲಿನ ವಿಷಯವೇ ಆಗಿದೆ.ನಿಮ್ಮ ದೈನಂದಿನ ಜೀವನದಲ್ಲಿ ಉತ್ತಮ ಡಿಜಿಟಲ್ ಅಭ್ಯಾಸಗಳನ್ನು ಮೈಗೂಡಿಸಿಕೊಂಡು, ರೂಢಿ ಮಾಡುವುದನ್ನು ಸುಲಭಗೊಳಿಸಲು ನಾವು ಈ ಮಾರ್ಗಸೂಚಿಯನ್ನು ಕುಟುಂಬಗಳಿಗಾಗಿ ರಚಿಸಿದ್ದೇವೆ. ಉತ್ತಮ ವಿಚಾರಗಳಿಂದ ತುಂಬಿರುವ ಈ ಮಾರ್ಗಸೂಚಿಯು, Internet awesomeness ನ ಐದು ಕ್ಷೇತ್ರಗಳ ಬಗ್ಗೆ ನೀವು ಹಾಗೂ ನಿಮ್ಮ ಮಕ್ಕಳು ಜೊತೆಗೂಡಿ ಚರ್ಚಿಸಲು, ಕಲಿಯಲು ಮತ್ತು ಆಲೋಚಿಸಲು ಸಹಾಯ ಮಾಡುತ್ತದೆ:

**ಜಾಣತನ**, ಹಂಚಿಕೊಳ್ಳುವಾಗ ಎಚ್ಚರವಿರಲಿ
**ಎಚ್ಚರಿಕೆ**, ನಕಲಿ ವಿಷಯಗಳಿಗೆ ಮರುಳಾಗಿ ಮೋಸಹೋಗಬೇಡಿ
**ಸದೃಢತೆ**, ನಿಮ್ಮ ರಹಸ್ಯಗಳನ್ನು ಸುರಕ್ಷಿತವಾಗಿರಿಸಿಕೊಳ್ಳಿ
**ಕರುಣೆ**, ದಯೆಯೇ ಧರ್ಮದ ಮೂಲ
**ಧೈರ್ಯ**, ಸಂದೇಹ ಬಂದಾಗ ಮಾತನಾಡಿ ಬಗೆಹರಿಸಿಕೊಳ್ಳಿ

ಇವುಗಳಲ್ಲಿ ಪ್ರತಿಯೊಂದು ಕ್ಷೇತ್ರವೂ ಸಹ, ದೇಶಾದ್ಯಂತ ಹಾಗೂ ಪ್ರಪಂಚದಾದ್ಯಂತ ಹೆಚ್ಚು-ಹೆಚ್ಚು ಶಾಲೆಗಳಲ್ಲಿ ಬಳಸಲಾಗುತ್ತಿರುವ Be Internet Awesome ಪ್ರೋಗ್ರಾಂನ ಮುಖ್ಯ ಘಟಕವಾಗಿದೆ. ನಿಮ್ಮ ಮಕ್ಕಳು Be Internet Awesome ಪ್ರೋಗ್ರಾಂ ಅನ್ನು ಶಾಲೆಯಲ್ಲಿ ಕಲಿಯುತ್ತಿದ್ದರೆ, ಅವರು ತರಗತಿಯಲ್ಲಿ ಕಲಿಯುತ್ತಿರುವುದನ್ನು ಅನುಸರಿಸಲು ಮತ್ತು ಬಲಪಡಿಸಲು ಈ ಮಾರ್ಗಸೂಚಿಯು ನಿಮಗೆ ಸಹಾಯ ಮಾಡುತ್ತದೆ.

ಉದಾಹರಣೆಗೆ, Be Internet Awesome ನ ಇಂಟರ್‌ಯಾಕ್ಟಿವ್ ಆನ್‌ಲೈನ್ ಗೇಮ್ ಆಗಿರುವ ಇಂಟರ್‌ಲ್ಯಾಂಡ್ ಅನ್ನು ಮನೆಯಲ್ಲೂ ಆಡಬಹುದಾಗಿದೆ. ನಿಜ ಹೇಳಬೇಕಾದರೆ, ಅದನ್ನು ಹೇಗೆ ಆಡಬೇಕು ಎಂದು ನಿಮಗೆ ತೋರಿಸಲು ಅಥವಾ ನಿಮ್ಮೊಂದಿಗೆ ಆಡಲು ಸಹ ಮಕ್ಕಳು ಖುಷಿಪಡಬಹುದು!

ಆನ್‌ಲೈನ್ ಸುರಕ್ಷತೆ ಹಾಗೂ ನಾಗರಿಕತೆಯ ಕುರಿತು ನಿಮ್ಮ ಮನೆಯವರು ತಿಳಿದುಕೊಳ್ಳುವುದಕ್ಕಾಗಿ ಒಂದು ಸ್ವತಂತ್ರ ಸಂಪನ್ಮೂಲವನ್ನು ಒದಗಿಸಲು ನಾವು ಈ ಮಾರ್ಗಸೂಚಿಯನ್ನು ರಚಿಸಿದ್ದೇವೆ. ಇಂಟರ್ನೆಟ್ ಅನ್ನು ಸುರಕ್ಷಿತವಾಗಿ, ಯಶಸ್ವಿಯಾಗಿ ಬಳಸುವುದಕ್ಕೆ ದೃಢವಾದ ಅಡಿಪಾಯವನ್ನು ನಿರ್ಮಿಸಲು ಸಹಾಯ ಮಾಡುವ ಕೌಟುಂಬಿಕ ಚರ್ಚೆಗಳು ಮತ್ತು ಚಟುವಟಿಕೆಗಳಿಗಾಗಿ ಬಳಸಿಕೊಳ್ಳಲು, ಐದೂ ಪಾಠಗಳಿಗಾಗಿ ಇಂಟರ್‌ಲ್ಯಾಂಡ್ ಗೇಮ್‌ಗಳು ಮಾತ್ರವಲ್ಲದೆ, ಪದಕೋಶ ಮತ್ತು ಚರ್ಚೆಯ ಅಂಶಗಳನ್ನು ಸಹ ನೀವು ಕಾಣುವಿರಿ.

ಕುಟುಂಬಗಳಿಗಾಗಿ ರಚಿಸಲಾಗಿರುವ Be Internet awesome ಅನ್ನು ಜೊತೆಗೂಡಿ ಅನ್ವೇಷಿಸಿ, ಆನಂದಿಸಿ!

ವಿಧೇಯಪೂರ್ವಕವಾಗಿ,
Be Internet Awesome ತಂಡ ಹಾಗೂ
ಇಂಟರ್‌ನಾಟ್‌ಗಳು 💙

the net safety collaborative

Google



Be Internet Smart 04
ಹಂಚಿಕೊಳ್ಳುವಾಗ ಎಚ್ಚರವಹಿಸಿ

Be Internet Alert 10
ನಕಲಿ ವಿಷಯಗಳಿಗೆ ಮರುಳಾಗಿ ಮೋಸಹೋಗಬೇಡಿ

Be Internet Strong 14
ನಿಮ್ಮ ರಹಸ್ಯಗಳನ್ನು ಸುರಕ್ಷಿತವಾಗಿರಿಸಿ

Be Internet Kind 18
ದಯೆಯೇ ಧರ್ಮದ ಮೂಲ

Be Internet Brave 23
ಸಂದೇಹ ಬಂದಾಗ, ಮಾತನಾಡಿ ಬಗೆಹರಿಸಿಕೊಳ್ಳಿ

Google 29
Family Link

# ಹಂಚಿಕೊಳ್ಳುವಾಗ ಎಚ್ಚರವಹಿಸಿ

ಆನ್‌ಲೈನ್‌ನಲ್ಲಿ ಮಾಹಿತಿಯು ಬಲುಬೇಗನೆ ಹರಡುತ್ತದೆ. ಕೆಲವೊಮ್ಮೆ ನಾವು ಸರಿಯಾಗಿ ಮುಂದಾಲೋಚನೆ ಮಾಡದೆ, ಶಾಶ್ವತ ಪರಿಣಾಮಗಳನ್ನು ಉಂಟುಮಾಡುವ ಜಟಿಲ ಪರಿಸ್ಥಿತಿಯಲ್ಲಿ ಸಿಲುಕಿಕೊಳ್ಳಬಹುದು.

ಪರಿಹಾರವೇನು? ನಮಗೆ ಪರಿಚಯವಿರುವ ಮತ್ತು ಹೆಚ್ಚು ಪರಿಚಯವಿಲ್ಲದಿರುವವರೊಂದಿಗೆ ಹೇಗೆ ಮತ್ತು ಏನನ್ನು ಹಂಚಿಕೊಳ್ಳಬೇಕು ಎಂಬುದನ್ನು ಕಲಿಯುವುದು



## ಗುರಿಗಳು

- ಯಾವ ರೀತಿಯ ಮಾಹಿತಿಯನ್ನು ಹಂಚಿಕೊಂಡರೆ ಪರವಾಗಿಲ್ಲ ಮತ್ತು ಯಾವುದನ್ನು ಖಾಸಗಿಯಾಗಿ - ಅಥವಾ ನಿಮ್ಮ ಕುಟುಂಬಕ್ಕೆ ಸೀಮಿತವಾಗಿರಿಸಬೇಕು ಎನ್ನುವುದನ್ನು **ಅರ್ಥಮಾಡಿಕೊಳ್ಳುವುದು.**
- ಏನನ್ನು ಹಂಚಿಕೊಳ್ಳಬೇಕು ಮತ್ತು ಯಾರೊಂದಿಗೆ ಹಂಚಿಕೊಳ್ಳಬೇಕು ಎಂಬ ಬಗ್ಗೆ ನಿಮ್ಮ ಮಕ್ಕಳು ಆಲೋಚಿಸುವಾಗ, ಅವರೇನು ಮಾಡಬಹುದು ಎಂಬ ಕುರಿತು ಒಂದು ಕುಟುಂಬವಾಗಿ **ಮಾತನಾಡುವುದು.**
- ಗೌಪ್ಯತೆಯನ್ನು ವಿವಿಧ ದೃಷ್ಟಿಕೋನಗಳಿಂದ ಹೇಗೆ ನೋಡಬಹುದು ಎಂಬುದನ್ನು **ಕಲಿಯುವುದು.**

## ನೀವು ಪ್ರಾರಂಭಿಸುವ ಮೊದಲು

ನಾವು ಆನ್‌ಲೈನ್‌ನಲ್ಲಿ - ವಿಶೇಷವಾಗಿ ಸಾಮಾಜಿಕ ಮಾಧ್ಯಮದಲ್ಲಿ ನಮ್ಮ ಬಗ್ಗೆ ಹಾಗೂ ನಮ್ಮ ಕುಟುಂಬಗಳ ಬಗ್ಗೆ ಏನೇನು ಹಂಚಿಕೊಳ್ಳುತ್ತೇವೆ ಮತ್ತು ಏನನ್ನು ಹಂಚಿಕೊಳ್ಳುವುದಿಲ್ಲ ಎಂಬುದನ್ನು ನಮ್ಮ ಆನ್‌ಲೈನ್ ಗೌಪ್ಯತೆಯು ಬಹುಮಟ್ಟಿಗೆ ಅವಲಂಬಿಸಿರುತ್ತದೆ. ಯಾವುದನ್ನು ಹಂಚಿಕೊಂಡರೆ ತೊಂದರೆಯಿಲ್ಲ ಮತ್ತು ಯಾವುದನ್ನು ಹಂಚಿಕೊಳ್ಳಬಾರದು ಎಂಬ ತಿಳುವಳಿಕೆಯು, ಮಕ್ಕಳು ಹೊಂದಿರಬೇಕಾದ ಒಂದು ಪ್ರಮುಖ ಕೌಶಲ್ಯವಾಗಿದೆ. ಈ ಕೌಶಲ್ಯವನ್ನು ನಾವು ಅಭ್ಯಾಸದ ಮೂಲಕ ಮೈಗೂಡಿಸಿಕೊಳ್ಳಬಹುದು ಮತ್ತು ಇದನ್ನು ಆರಂಭಿಸಲು ಅತ್ಯುತ್ತಮ ಸ್ಥಳವು ನಮ್ಮ ಮನೆಯೇ ಆಗಿದೆ.

ಈ ಕೌಶಲ್ಯವನ್ನು ಬೆಳೆಸಿಕೊಳ್ಳುವುದರ ಒಂದು ಭಾಗವೆಂದರೆ, ಎಲ್ಲಾ ಕುಟುಂಬಗಳಿಗೆ ಅನ್ವಯಿಸುವ ಎರಡು ರೀತಿಯ ಹಂಚಿಕೊಳ್ಳುವಿಕೆಗಳ ಬಗ್ಗೆ ಆಲೋಚಿಸುವುದು: ಆಂತರಿಕ (ಕುಟುಂಬದ ಸದಸ್ಯರೊಂದಿಗೆ ಮಾತ್ರ ಹಂಚಿಕೊಳ್ಳುವುದು) ಮತ್ತು ಬಾಹ್ಯ (ಕುಟುಂಬದ ಹೊರಗಿನ ಜನರೊಂದಿಗೆ ಹಂಚಿಕೊಳ್ಳುವುದು).

**ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳುವುದು:**

ಹಲವಾರು ಕುಟುಂಬಗಳಲ್ಲಿ ಜನರು, ಸಾಧನಗಳನ್ನು ತಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳುತ್ತಾರೆ - ಮಾಹಿತಿಯನ್ನು ಹುಡುಕುವುದಕ್ಕಾಗಿ, ಪರಸ್ಥಳದಲ್ಲಿರುವ ಅಜ್ಜ-ಅಜ್ಜಿಯರೊಂದಿಗೆ ಮಾತನಾಡುವುದಕ್ಕಾಗಿ, ಖರೀದಿ ಮಾಡುವುದಕ್ಕಾಗಿ, ಆಟ ಆಡುವುದಕ್ಕಾಗಿ ಅಥವಾ ತಂದೆ-ತಾಯಿ ಕೆಲಸದಲ್ಲಿ ನಿರತರಾಗಿರುವಾಗ ವೀಡಿಯೊ ವೀಕ್ಷಿಸುವುದಕ್ಕಾಗಿ ಬಳಕೆ ಮಾಡುತ್ತಾರೆ. ಆದರೆ ನೀವು ಸಾಧನವನ್ನು ಹಂಚಿಕೊಳ್ಳುವಾಗ ಏನೇನನ್ನು ಹಂಚಿಕೊಳ್ಳುತ್ತೀರಿ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ.

ಇದು ನಿಮ್ಮ ಸಾಧನವಾದರೆ, ಇದರಲ್ಲಿರುವ ಸೆಟ್ಟಿಂಗ್‌ಗಳು, ಕಾಂಟ್ಯಾಕ್ಟ್‌ಗಳು, ಪಾಸ್‌ವರ್ಡ್‌ಗಳು ಮತ್ತು ಕ್ರೆಡಿಟ್ ಕಾರ್ಡ್ ಮಾಹಿತಿಯನ್ನು ಸಹ ಬಳಸಲು ನಿಮ್ಮ ಮಗುವಿಗೆ ನೀವು ಅವಕಾಶ ನೀಡುತ್ತಿದ್ದೀರಿ ಮತ್ತು ಅವರು ನೋಡುವುದು, ಬಳಸುವುದು ಅಥವಾ ಹಂಚಿಕೊಳ್ಳುವುದು ಸೂಕ್ತವಲ್ಲದೇ ಇರಬಹುದಾದ ಕೆಲವೊಂದು ಮಾಹಿತಿಗಳೂ ಇದರಲ್ಲಿ ಸೇರಿರಬಹುದು. ತಂದೆ-ತಾಯಿಯ ಸಾಧನಗಳನ್ನು ಬಳಸಿಕೊಂಡು ಮಕ್ಕಳು, ತಂದೆ-ತಾಯಿಗೆ ಅಷ್ಟೊಂದು ವಿಶ್ವಾಸವಿರದ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ವಿಷಯಗಳಿಗೆ ಸೈನಪ್ ಮಾಡಬಹುದು. ಮಾತ್ರವಲ್ಲದೆ, ನೀವು ಕುಟುಂಬದ ಸದಸ್ಯರೊಂದಿಗೆ ಪಾಸ್‌ವರ್ಡ್ ಹಂಚಿಕೊಳ್ಳುವ ಅಭ್ಯಾಸ ಇರಿಸಿಕೊಳ್ಳಲು ಬಯಸುತ್ತೀರಾ ಎಂಬುದರ ಬಗ್ಗೆಯೂ ಆಲೋಚಿಸುವುದು ಒಳ್ಳೆಯದು (ಏಕೆಂದರೆ, ಇತರ ಜನರೊಂದಿಗೆ ಪಾಸ್‌ವರ್ಡ್‌ಗಳನ್ನು ಹಂಚಿಕೊಳ್ಳದಿರುವುದು ಒಳ್ಳೆಯ ವಿಷಯವಾಗಿದೆ). ಕಟ್ಟಕಡೆಗೆ, ಈ ಮಾರ್ಗಸೂಚಿಯ ಸಹಾಯದಿಂದ ನೀವು ಮಾಹಿತಿಯುತ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಾಗಬೇಕೆಂದು ನಾವು ಆಶಿಸುತ್ತೇವೆ

**ಕುಟುಂಬದ ಹೊರಗಿನ ಜನರೊಂದಿಗೆ ಹಂಚಿಕೊಳ್ಳುವುದು:**

ನಮ್ಮ ಆನ್‌ಲೈನ್ ಜೀವನವು ನಮ್ಮ ನಿಜ ಜೀವನದ ಪ್ರತಿಬಿಂಬವಾಗಿರುತ್ತದೆ: ಕುಟುಂಬದ ಹೊರಗಿನ ಜನರು ತಿಳಿದುಕೊಳ್ಳುವ ಅಗತ್ಯವಿಲ್ಲದ ಕೆಲವೊಂದು ಖಾಸಗಿ ಮತ್ತು ಕೌಟುಂಬಿಕ ಮಾಹಿತಿ ಇರುತ್ತದೆ. ಇದು ಕೇವಲ ಪಾಸ್‌ವರ್ಡ್‌ಗಳು ಮತ್ತು ವಿಳಾಸಗಳಿಗೆ ಸಂಬಂಧಪಟ್ಟ ವಿಷಯವಲ್ಲ, ಇದರಲ್ಲಿ ಮಾಹಿತಿಯೂ ಸೇರಿದೆ - ಅಂದರೆ, ನೀವು ರಜೆಯಲ್ಲಿ ಯಾವಾಗ ಮತ್ತು ಎಲ್ಲಿಗೆ ತಿರುಗಾಡಲು ಹೋಗುತ್ತೀರಿ ಅಥವಾ ಕುಟುಂಬದಲ್ಲಿ ಮುಂದಿನ ಮಗು ಯಾರಿಗೆ ಹುಟ್ಟಲಿದೆ ಎಂಬಂತಹ ಮಾಹಿತಿ.

ನಿಮ್ಮ ಮನಸ್ಸಿಗೆ ಇನ್ನಷ್ಟು ವಿಷಯಗಳು ಹೊಳೆಯಬಹುದು, ಆದರೆ ಪ್ರಾರಂಭಿಸುವುದಕ್ಕಾಗಿ, ಈ ಪಾಠದ ಪದಕೋಶವನ್ನು ನೋಡಿ ಮತ್ತು ನಂತರ ನಮ್ಮ ನಾಲ್ಕು ಗೌಪ್ಯತೆ ಸನ್ನಿವೇಶಗಳನ್ನು ಪರಿಶೀಲಿಸಿ. ನಿಮ್ಮ ಕುಟುಂಬದೊಂದಿಗೆ ಅಭ್ಯಾಸ ಮಾಡಿ; ಏನನ್ನು ಹಂಚಿಕೊಂಡರೆ ತೊಂದರೆಯಿಲ್ಲ (ಮತ್ತು ಏನನ್ನು ಹಂಚಿಕೊಳ್ಳಬಾರದು) ಎಂಬ ಕುರಿತು ಎಲ್ಲರೂ ತಮ್ಮ-ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಬಹುದು.

## ಪದಪಟ್ಟಿ

### ಆನ್‌ಲೈನ್ ಗೌಪ್ಯತೆ

ಈ ಪದಕ್ಕೆ ವಿಶಾಲವಾದ ಅರ್ಥವಿದೆ ಮತ್ತು ಇದು ಸಾಮಾನ್ಯವಾಗಿ ಆನ್‌ಲೈನ್‌ನಲ್ಲಿ ನಿಮ್ಮ ಬಗ್ಗೆ ನೀವು ಯಾವ ಮಾಹಿತಿಯನ್ನು ಹಂಚಿಕೊಳ್ಳುತ್ತೀರಿ ಮತ್ತು ಅದನ್ನು ಯಾರು ನೋಡಬಹುದು ಮತ್ತು ಹಂಚಿಕೊಳ್ಳಬಹುದು ಎಂಬುದನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಸೂಚಿಸುತ್ತದೆ.

### ಡಿಜಿಟಲ್ ಫೂಟ್‌ಪ್ರಿಂಟ್

(ಅಥವಾ ಡಿಜಿಟಲ್ ಉಪಸ್ಥಿತಿ)

ನಿಮ್ಮ ಡಿಜಿಟಲ್ ಫೂಟ್‌ಪ್ರಿಂಟ್ ಎಂದರೆ ಆನ್ ಲೈನ್‌ನಲ್ಲಿ ನಿಮ್ಮ ಕುರಿತಾಗಿ ಕಾಣಿಸಿಕೊಳ್ಳುವ ಎಲ್ಲಾ ಮಾಹಿತಿ. ಇದರಲ್ಲಿ ಫೋಟೋಗಳು, ಆಡಿಯೋ, ವೀಡಿಯೊಗಳು, ಮತ್ತು ಪಠ್ಯಗಳಿಂದ ಆರಂಭಿಸಿ ನಿಮ್ಮ ಸ್ನೇಹಿತರ ಪ್ರೊಫೈಲ್‌ಗಳಲ್ಲಿ ನೀವು ಪೋಸ್ಟ್ ಮಾಡುವ "ಲೈಕ್‌ಗಳು" ಹಾಗೂ ಕಾಮೆಂಟ್‌ಗಳು ಸೇರಿರಬಹುದು. ನೀವು ನಡೆಯುವಾಗ ನಿಮ್ಮ ಹೆಜ್ಜೆಗಳು ನೆಲದ ಮೇಲೆ ಹೇಗೆ ಛಾಪು ಮೂಡಿಸುತ್ತವೆಯೋ, ಹಾಗೆಯೇ ನೀವು ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡುವ ವಿಷಯವು ಸಹ ಒಂದು ಜಾಡನ್ನು ಸೃಷ್ಟಿಸುತ್ತದೆ.

### ಗೌರವ

ಇತರ ಜನರಿಗೆ ನಿಮ್ಮ ಬಗ್ಗೆ ಇರುವ ಕಲ್ಪನೆಗಳು, ಅಭಿಪ್ರಾಯಗಳು, ಅನಿಸಿಕೆಗಳು ಅಥವಾ ನಂಬಿಕೆಗಳು; ಇವುಗಳ ಬಗ್ಗೆ ನೀವು ಸಂಪೂರ್ಣವಾಗಿ, ಖಚಿತವಾಗಿ ತಿಳಿದುಕೊಳ್ಳಲಾರಿರಿ ಆದರೆ ಇವು ಸಕಾರಾತ್ಮಕವಾಗಿರಬೇಕು ಅಥವಾ ಉತ್ತಮವಾಗಿರಬೇಕೆಂದು ನೀವು ಬಯಸುವಿರಿ.

### ವೈಯಕ್ತಿಕ ಮಾಹಿತಿ

ನಿರ್ದಿಷ್ಟ ವ್ಯಕ್ತಿಯನ್ನು ಗುರುತಿಸುವ ಮಾಹಿತಿ. ಉದಾಹರಣೆಗೆ ನಿಮ್ಮ ಹೆಸರು, ರಸ್ತೆ ವಿಳಾಸ, ಫೋನ್ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ, ಇಮೇಲ್ ವಿಳಾಸ ಇತ್ಯಾದಿಗಳನ್ನು ವೈಯಕ್ತಿಕ (ಅಥವಾ ಸೂಕ್ಷ್ಮ) ಮಾಹಿತಿ ಎಂದು ಕರೆಯಲಾಗುತ್ತದೆ. ಈ ರೀತಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಹಂಚಿಕೊಳ್ಳುವ ಮೊದಲು ನಿಜಕ್ಕೂ ಎಚ್ಚರಿಕೆಯಿಂದ ಆಲೋಚಿಸಿ.

### ಅತಿಯಾಗಿ ಹಂಚಿಕೊಳ್ಳುವುದು

ಆನ್‌ಲೈನ್‌ನಲ್ಲಿ ಅತಿಯಾಗಿ ಹಂಚಿಕೊಳ್ಳುವುದು - ಸಾಮಾನ್ಯವಾಗಿ ಇದರ ಅರ್ಥ, ತೀರಾ ಹೆಚ್ಚು ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವುದು ಅಥವಾ ಆನ್‌ಲೈನ್‌ನಲ್ಲಿ ನಿರ್ದಿಷ್ಟ ಸಂದರ್ಭದಲ್ಲಿ ಅಥವಾ ಮಾತುಕತೆಯಲ್ಲಿ ನಿಮ್ಮ ಕುರಿತು ತೀರಾ ಹೆಚ್ಚು ವಿಷಯಗಳನ್ನು ಹಂಚಿಕೊಳ್ಳುವುದು ಎಂದಾಗಿರುತ್ತದೆ.

### ಸೆಟ್ಟಿಂಗ್‌ಗಳು

ಯಾವುದೇ ಡಿಜಿಟಲ್ ಉತ್ಪನ್ನ, ಆ್ಯಪ್, ವೆಬ್‌ಸೈಟ್ ಇತ್ಯಾದಿಗಳಲ್ಲಿ ನಿಮ್ಮ ಗೌಪ್ಯತೆಯ ಸೆಟ್ಟಿಂಗ್‌ಗಳು ಸೇರಿದ ಹಾಗೆ, ನೀವು ಏನನ್ನು ಹಂಚಿಕೊಳ್ಳುತ್ತೀರಿ ಮತ್ತು ನಿಮ್ಮ ಖಾತೆಯನ್ನು ಹೇಗೆ ನಿಭಾಯಿಸಲಾಗುತ್ತದೆ ಎನ್ನುವುದನ್ನು ನೀವು ವ್ಯಾಖ್ಯಾನಿಸಬಹುದಾದ ಅಥವಾ ಹೊಂದಾಣಿಕೆ ಮಾಡಬಹುದಾದ ಸ್ಥಳ ಇದಾಗಿದೆ.

# ಕುಟುಂಬ ಚಟುವಟಿಕೆ

## ಸನ್ನಿವೇಶ 1

## ಗೌಪ್ಯತೆಗೆ ಸಂಬಂಧಿಸಿದ ಸನ್ನಿವೇಶಗಳು: ನೀವೇನು ಮಾಡುತ್ತೀರಿ?

ಅಜ್ಜ-ಅಜ್ಜಿಯ ಮನೆಗೆ ಭೇಟಿ ನೀಡುವುದಕ್ಕಾಗಿ ನೀವು ಹಾಕಿಕೊಂಡಿರುವ ಯೋಜನೆಯ ಕುರಿತು ಮಕ್ಕಳು ನಿಜಕ್ಕೂ ಉತ್ಸಾಹದಿಂದಿದ್ದಾರೆ; ನೀವೂ ಸಹ ಅಷ್ಟೇ ಉತ್ಸಾಹದಲ್ಲಿದ್ದೀರಿ. ಅವರಲ್ಲಿ ಒಬ್ಬರು ನಿಮ್ಮ ಸ್ಮಾರ್ಟ್‌ಫೋನ್ ಬಳಸಿಕೊಂಡು ನಿಮ್ಮ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ನಲ್ಲಿ ಪ್ರವಾಸದ ಕುರಿತು ಪೋಸ್ಟ್ ಮಾಡುತ್ತಾರೆ - ನೀವು ಯಾವಾಗ ಹೋಗುತ್ತೀರಿ ಮತ್ತು ಎಲ್ಲಿಗೆ ಹೋಗುತ್ತೀರಿ ಎಂಬ ವಿವರಗಳು, ಫೋಟೋಗಳನ್ನು ಪೋಸ್ಟ್ ಮಾಡುತ್ತಾರೆ ಮತ್ತು ಪೋಸ್ಟ್‌ನಲ್ಲಿ ಅಜ್ಜ-ಅಜ್ಜಿಯನ್ನು ಸೇರಿಸಿ, ಎಲ್ಲರನ್ನೂ "ಟ್ಯಾಗ್" ಮಾಡುತ್ತಾರೆ. ನೀವು...

- ಸಾಮಾಜಿಕ ಮಾಧ್ಯಮದಲ್ಲಿ ರಜೆಯ ದಿನಾಂಕಗಳು ಹಾಗೂ ಸ್ಥಳಗಳ ಕುರಿತು ಪೋಸ್ಟ್ ಮಾಡುವುದು ವಿವೇಚನೆಯ ಕೆಲಸವಲ್ಲ, ಏಕೆಂದರೆ ಆ ಸಮಯದಲ್ಲಿ ಮನೆಯಲ್ಲಿ ಯಾರೂ ಇಲ್ಲ ಎಂದು "ಇಡೀ ಪ್ರಪಂಚಕ್ಕೆ ಹೇಳಿದ ಹಾಗೆ" ಆಗುತ್ತದೆ ಎಂಬ ಕಾರಣಕ್ಕೆ ಪೋಸ್ಟ್ ಅಳಿಸಲು ಅವರಿಗೆ ಹೇಳುತ್ತೀರಾ?

- ಆ ಫೋಟೋಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲು ಮತ್ತು ಅಜ್ಜ-ಅಜ್ಜಿಯನ್ನು ಟ್ಯಾಗ್ ಮಾಡಲು ಮಕ್ಕಳು ಅವರ ಬಳಿ ಅನುಮತಿ ಪಡೆದಿದ್ದಾರೆಯೇ ಎಂದು ಕೇಳುತ್ತೀರಾ? ಅವರು ಯಾರದಾದರೂ ಫೋಟೊ ತೆಗೆದಾಗ ಮತ್ತು ಆ ವ್ಯಕ್ತಿಯ ಕುರಿತು ಆನ್‌ಲೈನ್‌ನಲ್ಲಿ ಮಾತನಾಡುವಾಗ, ಅವರ ಕುರಿತು ಏನನ್ನಾದರೂ ಪೋಸ್ಟ್ ಮಾಡುವ ಮೊದಲು ಯಾವಾಗಲೂ ಆ ವ್ಯಕ್ತಿಯ ಅನುಮತಿ ಕೇಳಬೇಕೆಂದು ನೆನಪಿಸುತ್ತೀರಾ? ಆನ್‌ಲೈನ್‌ನಲ್ಲಿ ಏನನ್ನಾದರೂ ಹಂಚಿಕೊಂಡರೆ ಪರವಾಗಿಲ್ಲವೇ ಎಂಬ ಕುರಿತು ಖಚಿತವಾಗಿ ತಿಳಿದಿರದಿದ್ದಾಗ, ಅವರು ಯಾವಾಗಲೂ ನಿಮ್ಮ ಬಳಿ ಬಂದು ಕೇಳಬಹುದೆಂದು ಹೇಳುತ್ತೀರಾ?

**ತಂದೆ-ತಾಯಿಗಾಗಿ ಮಾರ್ಗಸೂಚಿ:** ಈ ಎಲ್ಲಾ ಸಂಗತಿಗಳು, ಒಂದು ಕುಟುಂಬವಾಗಿ ಮಾತನಾಡಲು ಒಳ್ಳೆಯ ವಿಷಯಗಳಾಗಿವೆ. ಮನೆಯಲ್ಲಿ ಯಾರೂ ಇಲ್ಲ ಎಂಬುದನ್ನು ಇಡೀ ಪ್ರಪಂಚಕ್ಕೆ ತಿಳಿಸುವುದು ಒಳ್ಳೆಯ ಸಂಗತಿಯಲ್ಲ ಎಂದು ನೀವು ಬಹುಶಃ ನಿಮ್ಮ ಮಕ್ಕಳಿಗೆ ಈಗಾಗಲೇ ಹೇಳಿರುತ್ತೀರಿ, ಆದರೆ ತಮ್ಮ ಬಗ್ಗೆ ಯಾವ ವಿಷಯವನ್ನು ಸಾರ್ವಜನಿಕಗೊಳಿಸಬಹುದು ಎಂಬ ಬಗ್ಗೆ ಎಲ್ಲರಿಗೂ ತಮ್ಮದೇ ಆದ ಆರಾಮ-ವಲಯಗಳಿರುತ್ತವೆ ಎಂದು ಮಕ್ಕಳು ಅರಿತುಕೊಳ್ಳುವುದು ಸಹ ಮುಖ್ಯವಾಗಿದೆ.

## ಸನ್ನಿವೇಶ 2

ನಿಮ್ಮ ಸಹೋದರಿಯು ತಾನು ಗರ್ಭಿಣಿ ಎಂದು ಈಗಷ್ಟೇ ತಿಳಿಸಿದ್ದಾರೆ, ಮತ್ತು ತಮಗೊಂದು ಪುಟ್ಟ ಕಸಿನ್ ಬರಲಿದೆ ಎಂದು ತಿಳಿದು ನಿಮ್ಮ ಮಕ್ಕಳಿಗೆ ರೋಮಾಂಚನವಾಗಿದೆ. ನಿಮ್ಮ ದೊಡ್ಡ ಮಗ, ತನ್ನ ಅತ್ತೆ-ಮಾವನ ಫೋಟೋವನ್ನು ಮತ್ತು ಅವರಿಗೆ ಮಗುವಾಗಲಿದೆ ಎಂಬ ಸುದ್ದಿಯನ್ನು ಪೋಸ್ಟ್ ಮಾಡಿದ್ದೇನೆ ಎಂದು ನಿಮಗೆ ತಿಳಿಸುತ್ತಾನೆ, ಆದರೆ ನಿಮ್ಮ ಸಹೋದರಿಯಿಂದ ಪಠ್ಯ ಸಂದೇಶ ಬಂದ ನಂತರವೇ ನಿಮಗೆ ಈ ವಿಷಯ ತಿಳಿಯುತ್ತದೆ: "ಹೇ, ನಾನು ಗರ್ಭಿಣಿ ಎಂದು ಅಪ್ಪ-ಅಮ್ಮನಿಗೆ ಹೇಗೆ ಗೊತ್ತಾಯಿತು? ನಾನು ಅವರಿಗೆ ಇನ್ನೂ ತಿಳಿಸಿಲ್ಲ! ". ನೀವು...

- ಪುಟ್ಟ ಮಗು ಬರಲಿರುವುದು ಒಂದು ಅದ್ಭುತ ವಿಷಯವಾಗಿದೆ, ಆದರೆ ಅದು ತುಂಬಾ ವೈಯಕ್ತಿಕವಾದ ವಿಚಾರವೂ ಆಗಿದೆ... ಅವರಿಗೆ ರೋಮಾಂಚನವಾಗಿದೆ ಎಂದು ನಿಮಗೆ ಗೊತ್ತಿದೆ, ಆದರೆ ತನಗೆ ಮಗುವಾಗಲಿದೆ ಎಂಬ ಸುದ್ದಿಯನ್ನು ಯಾವಾಗ, ಹೇಗೆ ಮತ್ತು ಯಾರೊಂದಿಗೆ ಹಂಚಿಕೊಳ್ಳಬೇಕೆಂಬ ನಿರ್ಧಾರವು ಸಂಪೂರ್ಣವಾಗಿ ಆ ವ್ಯಕ್ತಿಯದೇ ಆಗಿರುತ್ತದೆ ಎಂಬ ಕುರಿತು ನಿಮ್ಮ ಮಕ್ಕಳೊಂದಿಗೆ ಮಾತನಾಡುತ್ತೀರಾ?

- ನಿಮ್ಮ ಮಗನಿಗೆ (ಮತ್ತು ಎಲ್ಲಾ ಮಕ್ಕಳಿಗೆ) ಹಾನಿ ಮಾಡುವ ಉದ್ದೇಶವೇನೂ ಇರಲಿಲ್ಲ ಎಂಬುದು ನಿಮಗೆ ಗೊತ್ತಿದೆ, ಆದರೆ ಅವನು ಪೋಸ್ಟ್ ಅನ್ನು ತಕ್ಷಣವೇ ತೆಗೆದುಹಾಕಬೇಕು ಮತ್ತು ಅತ್ತೆಯ ಅನುಮತಿಯಿಲ್ಲದೆ ಆಕೆಯ ಕುರಿತು ಪೋಸ್ಟ್ ಮಾಡಿದ್ದಕ್ಕಾಗಿ ಕ್ಷಮೆ ಕೇಳಲು ಕರೆ ಮಾಡಬೇಕೆಂದು ಹೇಳುತ್ತೀರಾ?

- ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಳ್ಳಬಹುದಾದ, ವಿವಿಧ ರೀತಿಯ ಮಾಹಿತಿಯ ಕುರಿತು ಒಂದು ಕುಟುಂಬವಾಗಿ ಮಾತನಾಡಿ ಮತ್ತು: ನಿಮ್ಮ ನಿಕಟ ಕುಟುಂಬದವರೊಂದಿಗೆ, ಇತರ ಸಂಬಂಧಿಕರೊಂದಿಗೆ, ಸ್ನೇಹಿತರೊಂದಿಗೆ, ಎಲ್ಲರೊಂದಿಗೆ ಏನನ್ನು ಹಂಚಿಕೊಳ್ಳಬಹುದು ಎಂಬ ಬಗ್ಗೆ ಚರ್ಚಿಸಿ.

**ತಂದೆ-ತಾಯಿಗಾಗಿ ಮಾರ್ಗಸೂಚಿ:** ಸೂಕ್ತ ಸನ್ನಿವೇಶಗಳು ಉದ್ಭವಿಸಿದಾಗ ಈ ಚರ್ಚೆಗಳನ್ನು ನಡೆಸಿದರೆ ಪ್ರಯೋಜನಕಾರಿಯಾಗಿರುತ್ತದೆ; ನೀವು ಎಲ್ಲವನ್ನೂ ಒಮ್ಮೆಗೆ ಮುಗಿಸಲು ಅವಸರ ಮಾಡಬೇಕೆಂದೇನಿಲ್ಲ. ಈ ಮಾತುಕತೆಗಳು ತಲೆಚಿಟ್ಟು ಹಿಡಿಸುವಂತಿರಬಾರದು. ಹೆಚ್ಚಿನ ಕುಟುಂಬಗಳು ಗೌಪ್ಯತೆಯನ್ನು ಗೌರವಿಸುವ ಕುರಿತು ತಮ್ಮ ಮಕ್ಕಳಿಗೆ ಕಲಿಸುವ ವಿಷಯಗಳಿಗಿಂತ ಈ ಪಾಠಗಳು ಹೆಚ್ಚೇನೂ ಭಿನ್ನವಾಗಿಲ್ಲ - ಆ ಪಾಠಗಳು ತಂತ್ರಜ್ಞಾನ ಬಳಕೆಗೂ ಹೇಗೆ ಅನ್ವಯವಾಗುತ್ತವೆ ಎಂಬುದನ್ನು ತೋರಿಸಿಕೊಡುವುದು ಈ ಮಾರ್ಗಸೂಚಿಯ ಉದ್ದೇಶಗಳಲ್ಲಿ ಒಂದಾಗಿದೆ.

### ಸನ್ನಿವೇಶ 3

ನೀವು ರಾತ್ರಿಯ ಊಟ ಸಿದ್ಧಪಡಿಸುತ್ತಿದ್ದೀರಿ ಮತ್ತು 5ನೇ ತರಗತಿಯಲ್ಲಿರುವ ನಿಮ್ಮ ಮಗಳು, ತನ್ನ ಸ್ನೇಹಿತೆಯರು ಆಡಿ ನೋಡಲೇಬೇಕೆಂದು ಒತ್ತಾಯಿಸುತ್ತಿರುವ "ಈ ಆಟವನ್ನು ಆಡಲು ಹಾತೊರೆಯುತ್ತಿದ್ದೇನೆ" ಎಂದು ಹೇಳುತ್ತಾಳೆ. ನಿಮ್ಮ ಟ್ಯಾಬ್ಲೆಟ್‌ನಲ್ಲಿ ಆ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ, ರಾತ್ರಿಯ ಊಟದ ತನಕ ಆಡಲು ಅನುಮತಿ ನೀಡಬೇಕೆಂದು ಆಕೆ ಕೇಳುತ್ತಾಳೆ. ಪರಿಗಣಿಸಬೇಕಾದ ಕೆಲವು ಸಂಗತಿಗಳು:

- ಆಕೆ ನಿಮ್ಮ ಟ್ಯಾಬ್ಲೆಟ್ ಅನ್ನು ಬಳಸುವಾಗ, ನಿಮ್ಮ ಅನುಮತಿಯಿಲ್ಲದೆ ಪಾಸ್‌ವರ್ಡ್‌ಗಳನ್ನು ಬದಲಾಯಿಸಬಾರದು, ಕಾಂಟ್ಯಾಕ್ಟ್‌ಗಳಿಗೆ ಕರೆ ಮಾಡಬಾರದು ಅಥವಾ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಬಾರದು ಎಂಬುದೂ ಸೇರಿದ ಹಾಗೆ ಮೂಲ ನಿಯಮಗಳನ್ನು ಮನದಟ್ಟು ಮಾಡಿಸಿದ್ದೀರಿ. ನಿಮ್ಮ ಟ್ಯಾಬ್ಲೆಟ್‌ನಲ್ಲಿ ಆಕೆ ಏನು ಮಾಡಬಯಸುತ್ತಾಳೆ ಎಂಬ ಬಗ್ಗೆ ಆಕೆ ನಿಮಗೆ ಎಂದೂ ಸುಳ್ಳು ಹೇಳಿಲ್ಲ, ಆದ್ದರಿಂದ ಆಕೆ ಗೇಮ್ ಅನ್ನು ಡೌನ್‌ಲೋಡ್ ಮಾಡಿ ಆಡಬಹುದೆಂದು ನೀವು ಹೇಳುತ್ತೀರಿ.
- ಆಕೆಯ ಸ್ನೇಹಿತರು ಆಡುವ ಎಲ್ಲಾ ಗೇಮ್‌ಗಳು ಆಕೆಗೆ ಸೂಕ್ತವಾಗಿವೆಯೇ ಎಂಬುದು ನಿಮಗೆ ಖಚಿತವಾಗಿ ಗೊತ್ತಿಲ್ಲ, ಆದ್ದರಿಂದ ಆಕೆ ಗೇಮ್ ಅನ್ನು ಡೌನ್‌ಲೋಡ್ ಮಾಡಬಹುದು, ಆದರೆ ನೀವು ಅದನ್ನು ಪರಿಶೀಲಿಸಿ, ಆಡಲು ಅದು ಸೂಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳುವುದಕ್ಕಾಗಿ ರಾತ್ರಿಯ ಊಟ ಆಗುವವರೆಗೆ ಕಾಯಬೇಕು ಎಂದು ಹೇಳುತ್ತೀರಿ.
- ಆಕೆ ಗೇಮ್ ಅನ್ನು ಡೌನ್‌ಲೋಡ್ ಮಾಡಿದರೆ ಪರವಾಗಿಲ್ಲ ಎಂದು ನಿಮಗೆ ಅನಿಸುತ್ತದೆ, ಆದರೆ ನಿಮ್ಮ ಕುಟುಂಬವು ಸ್ಮಾರ್ಟ್ ಹಂಚಿಕೊಳ್ಳುವಿಕೆ ಅಭ್ಯಾಸಗಳನ್ನು ಜಾರಿಗೊಳಿಸಲು ನಿರ್ಧರಿಸಿದೆ, ಆದ್ದರಿಂದ ನೀವು ಪರಸ್ಪರರ ಜೊತೆ ಕೂಡಾ ಪಾಸ್‌ವರ್ಡ್ ಹಂಚಿಕೊಳ್ಳುತ್ತಿಲ್ಲ. ಆದ್ದರಿಂದ, ನೀವು ಟ್ಯಾಬ್ಲೆಟ್ ಅನ್ನು ಅನ್‌ಲಾಕ್ ಮಾಡುವುದಕ್ಕಾಗಿ ತೆಗೆದುಕೊಂಡುಬರಲು ಆಕೆಗೆ ಹೇಳುತ್ತೀರಿ.
- ಆಕೆಗೆ ನಿಮ್ಮ ಪಾಸ್‌ವರ್ಡ್ ಗೊತ್ತಿದೆ, ಆದರೆ ನೀವು ಗೇಮ್‌ನ ಕುರಿತು ಓದಲು ಬಯಸುತ್ತೀರಿ, ಆದ್ದರಿಂದ ರಾತ್ರಿಯ ಊಟ ಆಗುವವರೆಗೆ ಕಾಯಬೇಕೆಂದು ನೀವು ಹೇಳುತ್ತೀರಿ. ಅಲ್ಲಿಯವರೆಗೆ ಆಕೆ ಬೇರೇನಾದರೂ ಚಟುವಟಿಕೆಯಲ್ಲಿ ನಿರತಳಾಗುತ್ತಾಳೆ ಎಂದು ನೀವು ಭಾವಿಸುತ್ತೀರಿ.

**ತಂದೆ-ತಾಯಿಗಾಗಿ ಮಾರ್ಗಸೂಚಿ:** ಇವುಗಳಲ್ಲಿ ಯಾವುದು ಅತ್ಯುತ್ತಮ ಎನ್ನುವುದು, ಸಂಪೂರ್ಣವಾಗಿ ನಿಮ್ಮ ಕುಟುಂಬವನ್ನು ಆಧರಿಸಿದೆ ಮತ್ತು ಆನ್‌ಲೈನ್ ಅನುಭವಗಳನ್ನು ಸುರಕ್ಷಿತವಾಗಿರಿಸಲು ಮತ್ತು ಸಾಧನಗಳನ್ನು ಸುಭದ್ರವಾಗಿರಿಸಲು ನೀವು ಸ್ಥಾಪಿಸಿರುವ "ಮನೆಯ ನಿಯಮಗಳನ್ನು" ಅವಲಂಬಿಸಿರುತ್ತದೆ. ಪಾಸ್‌ವರ್ಡ್‌ಗಳು, ಸಾಧನ ಹಂಚಿಕೊಳ್ಳುವಿಕೆ, ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳುವಿಕೆ ಮತ್ತು ಗೇಮ್ ಆಡುವ ಕುರಿತು ನೀವು ಇನ್ನೂ ಯಾವುದೇ ನಿಯಮಗಳನ್ನು ಸ್ಥಾಪಿಸಿಲ್ಲ ಎಂದಾದರೆ, ನಿಮ್ಮದೇ ಆದ "ಮನೆಯ ನಿಯಮಗಳನ್ನು" ಹೊಂದಿಸಲು ಇವುಗಳಲ್ಲಿ ಒಂದನ್ನು ಪ್ರಯತ್ನಿಸಿ ನೋಡಬಹುದು.

**ಸನ್ನಿವೇಶ 4**

ನಿಮ್ಮ ಮಗಳು ನಿಮ್ಮಲ್ಲಿಗೆ ಬಂದು, ತನ್ನ ಶಾಲೆಯ ಒಬ್ಬ ಹುಡುಗಿ ತನ್ನ ಬೆಸ್ಟ್ ಫ್ರೆಂಡ್‌ನ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಏನನ್ನೋ ಪೋಸ್ಟ್ ಮಾಡಿದ್ದಾಳೆ; ಅದು ನಿಜವಾದ ವಿಚಾರ, ಆದರೆ ಅದೊಂದು ರಹಸ್ಯವಾಗಿತ್ತು ಮತ್ತು ಆ ಪೋಸ್ಟ್‌ನಿಂದ ನಿಮ್ಮ ಮಗಳಿಗೆ ನಿಜಕ್ಕೂ ಮುಜುಗರವಾಗಿದೆ ಮತ್ತು ತನ್ನ ಫ್ರೆಂಡ್ ಕುರಿತು ಆಕೆಗೆ ನಿಜಕ್ಕೂ ಮರುಕವಿದೆ ಎಂದು ಹೇಳುತ್ತಾಳೆ. ನೀವು:

- ಮುಂದಿನ ಬಾರಿ ಸಂಪೂರ್ಣ ಕುಟುಂಬವು ಜೊತೆಯಾಗಿದ್ದಾಗ ಈ ಸನ್ನಿವೇಶದ ಕುರಿತು ಮಾತನಾಡುತ್ತೀರಾ ಮತ್ತು ಆನ್‌ಲೈನ್‌ನಲ್ಲಿ ಹಾಗೂ ಆಫ್‌ಲೈನ್‌ನಲ್ಲಿ "ಗೌಪ್ಯತೆ" ಎಂದರೇನು ಎಂಬ ಬಗ್ಗೆ ಕುಟುಂಬದ ಪ್ರತಿ ಸದಸ್ಯರಿಗೆ ಏನನ್ನಿಸುತ್ತದೆ ಎಂದು ಕೇಳುತ್ತೀರಾ? ನಿಮ್ಮ ಗೌಪ್ಯತೆಯ ಹಾಗೆಯೇ ಇತರ ಜನರ ಗೌಪ್ಯತೆಯನ್ನು ಗೌರವಿಸುವುದು ಏಕೆ ಮುಖ್ಯವಾಗಿದೆ?

- ಮತ್ತೊಂದು ಹುಡುಗಿಯು ಆ ಪೋಸ್ಟ್ ಅನ್ನು ತೆಗೆದುಹಾಕಬೇಕೆಂದು ನಿಮ್ಮ ಮಗಳು ಹೇಳಬೇಕು ಮತ್ತು ತಾನು ಹಾಗೆ ಹೇಳಲು ಕಾರಣವೇನು ಎಂಬುದನ್ನೂ ಹೇಳಬೇಕು (ನಿಮ್ಮ ಮಗಳು ಅದಕ್ಕೆ ತಯಾರಿದ್ದಾಳೆಯೇ ಎಂದೂ ಸಹ ಕೇಳಿಕೊಳ್ಳಿ) ಎಂದು ಆಕೆಯ ಸ್ನೇಹಿತೆ ಬಯಸುತ್ತಾಳೆಯೇ ಎಂದು ನೋಡಲು ಹೇಳುತ್ತೀರಾ?

ಮೇಲಿನ ಎರಡನ್ನೂ ಪ್ರಯತ್ನಿಸುತ್ತೀರಾ?

**ತಂದೆ-ತಾಯಿಗಾಗಿ ಮಾರ್ಗಸೂಚಿ:** ಜೀವನದ ಕುರಿತು ನಾವು ಸಾಮಾಜಿಕ ಮಾಧ್ಯಮದಲ್ಲಿ ಹಲವಾರು ಮುಖ್ಯ ಪಾಠಗಳನ್ನು ಕಲಿತುಕೊಳ್ಳಬಹುದು. ನಿಜ ಜೀವನದಲ್ಲಿ ಇರುವ ಹಾಗೆಯೇ, ನಕಾರಾತ್ಮಕ ಸನ್ನಿವೇಶಗಳ ಕುರಿತು ಒಂದು ಕುಟುಂಬವಾಗಿ ಚರ್ಚಿಸುವುದರಿಂದ ಮತ್ತು ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಜೊತೆಯಾಗಿ ಚರ್ಚಿಸುವುದರಿಂದ, ಈ ಸನ್ನಿವೇಶಗಳನ್ನು, ಮಕ್ಕಳು ಅರ್ಥಪೂರ್ಣ ಪಾಠಗಳನ್ನು ಕಲಿತುಕೊಳ್ಳಬಹುದಾದ ಸದವಕಾಶಗಳನ್ನಾಗಿ ಪರಿವರ್ತಿಸಬಹುದು. ಮೈಂಡ್‌ಫುಲ್ ಮೌಂಟೇನ್




**ಮೈಂಡ್‌ಫುಲ್ ಮೌಂಟೇನ್**

ಸರಿ. ನೀವು ಮಾಹಿತಿಯ ಬೆಂಬಲವನ್ನು ಹೊಂದಿದ್ದೀರಿ ಮತ್ತು ಹಂಚಿಕೊಳ್ಳುವುದರ ಕುರಿತು ಸಂಪೂರ್ಣವಾಗಿ ತಿಳಿದುಕೊಂಡಿದ್ದೀರಿ. ಆದರೆ ನೀವು ನೇರವಾಗಿ ಇಂಟರ್ನೆಟ್ ಅನ್ನು ಕೈವಶ ಮಾಡಿಕೊಳ್ಳಲು ಹೋಗುವ ಮೊದಲು, ಆ ಉತ್ತಮ ಜ್ಞಾನವನ್ನು ಒಂದಿಷ್ಟು ಪರೀಕ್ಷಿಸೋಣ, ಆಗದೇ? ಇಂಟರ್‌ಲ್ಯಾಂಡ್ ಎಂಬ ಪರ್ವತಮಯ ಪ್ರದೇಶವು, ಎಲ್ಲರೂ ಬೆರೆಯುವ ಮತ್ತು ಭೇಟಿಯಾಗುವ ಒಂದು ಪಟ್ಟಣದ ಕೇಂದ್ರ-ಸ್ಥಳವಾಗಿದೆ ಮತ್ತು ನಿಮ್ಮ ಹೊಸ ಕೌಶಲ್ಯಗಳನ್ನು ಪ್ರದರ್ಶಿಸಲು ಸೂಕ್ತ ಸ್ಥಳವಾಗಿದೆ.

ಆದರೆ ನೀವು ಏನನ್ನು ಹಂಚಿಕೊಳ್ಳುತ್ತೀರಿ ಮತ್ತು ಯಾರೊಂದಿಗೆ ಹಂಚಿಕೊಳ್ಳುತ್ತೀರಿ ಎಂಬ ಬಗ್ಗೆ ತುಂಬಾ ಎಚ್ಚರಿಕೆ ವಹಿಸಬೇಕು. ಮಾಹಿತಿಯು ಬೆಳಕಿನಷ್ಟೇ ವೇಗವಾಗಿ ಚಲಿಸುತ್ತದೆ...ಮತ್ತು ನಿಮಗೆ ಪರಿಚಯವಿರುವ ಇಂಟರ್‌ನಾಟ್‌ಗಳಲ್ಲಿ ಅತಿಯಾಗಿ ಹಂಚಿಕೊಳ್ಳುವ ಒಬ್ಬ ವ್ಯಕ್ತಿ ಇದ್ದಾರೆ.

ನಿಮ್ಮ ಡೆಸ್ಕ್‌ಟಾಪ್ ಅಥವಾ ಮೊಬೈಲ್ ಸಾಧನದಲ್ಲಿ ವೆಬ್ ಬ್ರೌಸರ್ ತೆರೆಯಿರಿ ಮತ್ತು **g.co/MindfulMountai** ಗೆ ಭೇಟಿ ನೀಡಿ

# ನಕಲಿ ವಿಷಯಗಳಿಗೆ ಮರುಳಾಗಿ ಮೋಸಹೋಗಬೇಡಿ

ಮಕ್ಕಳು ಆನ್‌ಲೈನ್‌ನಲ್ಲಿ ನೋಡುವ ವಿಷಯವು ಯಾವಾಗಲೂ ಸತ್ಯ, ಪ್ರಾಮಾಣಿಕ ಅಥವಾ ವಿಶ್ವಾಸಾರ್ಹವಲ್ಲದೇ ಇರಬಹುದು ಎಂಬುದನ್ನು ಮಕ್ಕಳು ಅರಿತುಕೊಳ್ಳುವಂತೆ ಮಾಡುವುದು ಮುಖ್ಯ. ಯಾವುದು ನೈಜವಾಗಿದೆ ಮತ್ತು ಯಾವುದು ನಕಲಿಯಾಗಿದೆ ಎಂಬುದನ್ನು ಕಂಡುಕೊಳ್ಳುವುದು ಆನ್‌ಲೈನ್ ಸುರಕ್ಷತೆ ಹಾಗೂ ನಾಗರಿಕತೆಗೆ ಅತ್ಯಗತ್ಯ ಅಂಶವಾಗಿದೆ.



## ಗುರಿಗಳು

- ವಿಷಯವು ಆನ್‌ಲೈನ್‌ನಲ್ಲಿ ಇದೆ ಎಂದ ಮಾತ್ರಕ್ಕೆ ಅದು ಸತ್ಯವೆಂದು ಅರ್ಥವಲ್ಲ ಎಂಬುದನ್ನು **ಅರ್ಥಮಾಡಿಕೊಳ್ಳುವುದು**.
- ಆನ್‌ಲೈನ್ ಹುಡುಕಾಟ ಹೇಗೆ ಕೆಲಸ ಮಾಡುತ್ತದೆ ಮತ್ತು ವೆಬ್‌ನಲ್ಲಿ ಮಾಹಿತಿ ಅಥವಾ ಇತರ ಕಂಟೆಂಟ್ ಅನ್ನು ಹುಡುಕುವಾಗ ವಿಮರ್ಶಾತ್ಮಕವಾಗಿ ಯೋಚಿಸುವುದು ಏಕೆ ಮುಖ್ಯ ಎಂಬುದನ್ನು **ಕಲಿತುಕೊಳ್ಳುವುದು**.
- ಹುಡುಕಾಟ ಫಲಿತಾಂಶಗಳು, ವೆಬ್‌ಸೈಟ್‌ಗಳು ಮತ್ತು ಇತರ ಮಾಹಿತಿಯ ಮೌಲ್ಯದ ಕುರಿತು **ಆಲೋಚಿಸುವುದು** ಮತ್ತು ತಪ್ಪು ಮಾಹಿತಿ, "ಸುಳ್ಳು ಸುದ್ದಿ" ಹಾಗೂ ದುರ್ಬಳಕೆಯ ಕುರಿತು ಎಚ್ಚರಿಕೆಯಿಂದ ಇರುವುದು.

## ನೀವು ಪ್ರಾರಂಭಿಸುವ ಮೊದಲು

ಆನ್‌ಲೈನ್ ಹುಡುಕಾಟವು ದೈನಂದಿನ ಬದುಕಿನ ಮುಖ್ಯ ಭಾಗವಾಗಿದೆ. ಮತ್ತು, ಮಕ್ಕಳು ಶಾಲೆಗೆ ಹೋಗಲು ಆರಂಭಿಸುವುದಕ್ಕಿಂತ ಬಹಳ ಮುಂಚಿತವಾಗಿಯೇ ಇದು ಸಹಜವಾಗಿಯೇ ಕೌಟುಂಬಿಕ ಜೀವನದ ಭಾಗವೂ ಆಗಿಬಿಡುತ್ತದೆ. ಹುಡುಕಾಟ ಫಲಿತಾಂಶಗಳ ಕುರಿತು ಮತ್ತು ಹುಡುಕಾಟ ಎಂಜಿನ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಕುರಿತು ವಿಮರ್ಶಾತ್ಮಕವಾಗಿ ಆಲೋಚಿಸಲು ಕಲಿಯುವುದು, ಕುಟುಂಬಗಳು ಜೊತೆಗೂಡಿ ಕಲಿತುಕೊಳ್ಳಬಹುದಾದ ಅತ್ಯಂತ ಪ್ರಾಥಮಿಕ ಮತ್ತು ಉಪಯುಕ್ತ ಕೌಶಲ್ಯಗಳಲ್ಲಿ ಒಂದಾಗಿದೆ.

**"ಹುಡುಕಾಟ" ಎಂದರೇನು?**




ವೆಬ್‌ನಲ್ಲಿ ಹುಡುಕಾಟ ಮಾಡುವ ಮೂಲಕ ಜನರು, ಮಾಹಿತಿಯನ್ನು ವ್ಯವಸ್ಥಿತಗೊಳಿಸುವ ಹುಡುಕಾಟ ಎಂಜಿನ್ ಅನ್ನು ಬಳಸಿಕೊಂಡು ಆನ್‌ಲೈನ್‌ನಲ್ಲಿ ಮಾಹಿತಿಯನ್ನು ಸುಲಭವಾಗಿ ಮತ್ತು ವೇಗವಾಗಿ ಹುಡುಕಲು ಸಾಧ್ಯವಾಗುತ್ತದೆ. ಹೆಚ್ಚಿನ ಆಧುನಿಕ ಸಾಧನಗಳಲ್ಲಿ ಹುಡುಕಾಟ ನಡೆಸುವ ಸಾಮರ್ಥ್ಯವಿರುತ್ತದೆ, ಆದರೆ ಯಾವುದು ಸತ್ಯ, ಯಾವುದು ಸುಳ್ಳು ಅಥವಾ ಯಾವುದು ವಿಶ್ವಾಸಾರ್ಹವಾಗಿದೆ ಎಂಬುದನ್ನು ಹೇಳುವ ಸಾಮರ್ಥ್ಯ ಅವುಗಳಲ್ಲಿ ಇರುವುದಿಲ್ಲ - ಅದನ್ನು ಮಾಡಲು ಸದ್ಯದ ಮಟ್ಟಿಗೆ ಇರುವ ಅತ್ಯುತ್ತಮ ತಂತ್ರಜ್ಞಾನವೆಂದರೆ ಮನುಷ್ಯರ ಬುದ್ಧಿಶಕ್ತಿ ಮಾತ್ರ. ಆದರೂ, ನಿಮ್ಮ ಇಂಟರ್ನೆಟ್ "ವಾಸ್ತವಾಂಶ ಪರಿಶೀಲನೆ" ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಒಂದಿಷ್ಟು ತರಬೇತಿಯ ಅಗತ್ಯವಿರುತ್ತದೆ. ಪದಕೋಶ ವಿಭಾಗದ ನಂತರ ಇರುವ ಚಟುವಟಿಕೆಯನ್ನು ನೋಡಿ - ನಿಮ್ಮ ಕುಟುಂಬದ ಸದಸ್ಯರು ಚತುರ ಆನ್‌ಲೈನ್ ಹುಡುಕಾಟಗಾರರಾಗಲು ಇದು ಸಹಾಯ ಮಾಡುತ್ತದೆ!

## ಪದಪಟ್ಟಿ

**ಹುಡುಕಾಟ ಎಂಜಿನ್**
ಬಳಕೆದಾರರ ಪ್ರಶ್ನೆಗೆ ಸೂಕ್ತವಾದ ಮಾಹಿತಿಯನ್ನು ಡೇಟಾಬೇಸ್‌ನಲ್ಲಿ ಹುಡುಕುವ ಮತ್ತು ಗುರುತಿಸುವ ಒಂದು ಪ್ರೋಗ್ರಾಂ.

**ವೆಬ್-ಕ್ರಾಲರ್**
ಇದನ್ನು "ಬಾಟ್" ಎಂದೂ ಸಹ ಕರೆಯಲಾಗುತ್ತದೆ - ಇದು ಹುಡುಕಾಟ ಎಂಜಿನ್‌ನ ಒಳಗೆ ರನ್ ಆಗುವ ಪ್ರೋಗ್ರಾಂ ಆಗಿದೆ ಮತ್ತು ಇದು ಇಂಟರ್ನೆಟ್‌ನಲ್ಲಿ ನಿರಂತರವಾಗಿ "ಕ್ರಾಲ್" ಮಾಡುತ್ತಿರುತ್ತದೆ ಮತ್ತು ಹುಡುಕಾಟ ಬಾಕ್ಸ್‌ನಲ್ಲಿ ನೀವು ನಮೂದಿಸಿದ ಪ್ರಶ್ನೆಗಳಿಗೆ ಪ್ರತಿಕ್ರಿಯಿಸುವುದಕ್ಕಾಗಿ ಅದು ಭೇಟಿ ನೀಡುವ ಎಲ್ಲಾ ಸೈಟ್‌ಗಳು ಹಾಗೂ ಡೇಟಾಬೇಸ್ ಗಳಲ್ಲಿನ ಕಂಟೆಂಟ್ ಅನ್ನು "ಇಂಡೆಕ್ಸ್" ಮಾಡುತ್ತದೆ.

**ವರ್ಚುವಲ್ ಅಸಿಸ್ಟೆಂಟ್**
ವೆಬ್ ಕ್ರಾಲರ್‌ನ ಹಾಗೆಯೇ, ವರ್ಚುವಲ್ ಅಸಿಸ್ಟೆಂಟ್‌ಗಳು ಹುಡುಕಾಟ ಡೇಟಾಬೇಸ್‌ಗಳಿಂದ, ಬಳಕೆದಾರರ ಮಾಹಿತಿಯಿಂದ ಮತ್ತು ಇತರ ವೆಬ್‌ಸೈಟ್ ಗಳಿಂದ ಮಾಹಿತಿಯನ್ನು ಪಡೆದುಕೊಳ್ಳುತ್ತವೆ ಮತ್ತು ಪ್ರಶ್ನೆಗಳಿಗೆ ಸ್ವಯಂಚಾಲಿತವಾಗಿ ಉತ್ತರಿಸುವುದು, ಆದೇಶಗಳನ್ನು ಪಾಲಿಸುವುದು (ಉದಾಹರಣೆಗೆ, ನಿಮ್ಮ ಹೊಸ ಸ್ನೇಹಿತರ ಮನೆಗೆ ಹೋಗಲು ದಾರಿ ತೋರಿಸುವುದು) ಅಥವಾ ಸರಳ ಕಾರ್ಯಗಳನ್ನು (ಉದಾಹರಣೆಗೆ ಹಾಡು ಪ್ಲೇ ಮಾಡುವುದು) ಮಾಡುವ ಮೂಲಕ ಇವು ಸಹಾಯ ಮಾಡುತ್ತವೆ.

**ಹುಡುಕಾಟ ಫಲಿತಾಂಶಗಳು**
ವ್ಯಕ್ತಿಯು ಹುಡುಕಿದ ವಿಷಯಕ್ಕೆ ಪ್ರತಿಕ್ರಿಯೆಯಾಗಿ ಹುಡುಕಾಟ ಎಂಜಿನ್‌ನ ಪುಟದಲ್ಲಿ ಪ್ರಸ್ತುತಪಡಿಸಲಾದ ವೆಬ್‌ಸೈಟ್‌ಗಳು ಮತ್ತು ಇತರ ಮಾಹಿತಿ ಮೂಲಗಳ ಪಟ್ಟಿ.

**ಸುರಕ್ಷಿತ ಹುಡುಕಾಟ**
ಹುಡುಕಾಟಗಳಲ್ಲಿ ಅನುಚಿತವೆಂದು ಕಂಡುಬರುವ ಕಂಟೆಂಟ್ ಅನ್ನು ಹೊರಗಿಡಲು ತಂದೆ-ತಾಯಿ ಬಳಸಬಹುದಾದ ಫೀಚರ್; ಇದನ್ನು ಯಾವಾಗ ಬೇಕಾದರೂ ಸಕ್ರಿಯಗೊಳಿಸಬಹುದು ಅಥವಾ ನಿಷ್ಕ್ರಿಯಗೊಳಿಸಬಹುದು.

**ಮಿಸ್-ಇನ್‌ಫಾರ್ಮೇಶನ್ (ತಪ್ಪು ಮಾಹಿತಿ)**
ಸುಳ್ಳು, ನಕಲಿ, ದಾರಿ ತಪ್ಪಿಸುವ ಅಥವಾ ನಿಖರವಲ್ಲದ ಮಾಹಿತಿ.

**ಡಿಸ್-ಇನ್‌ಫಾರ್ಮೇಶನ್ (ತಪ್ಪು ಮಾಹಿತಿ)**
ಜನರ ದಾರಿ ತಪ್ಪಿಸಲು ಅಥವಾ ಮೋಸಗೊಳಿಸಲು ಉದ್ದೇಶಪೂರ್ವಕವಾಗಿ ಇರುವ ತಪ್ಪು ಮಾಹಿತಿ (ಮೇಲೆ ನೋಡಿ); ರಾಜಕೀಯ ವಿರೋಧಿ ಅಥವಾ ಬೇರೊಂದು ಸರಕಾರದ ಅಪಪ್ರಚಾರವೂ ಇದರಲ್ಲಿ ಸೇರಿದೆ.

**ಪರಿಶೀಲಿಸಬಹುದಾಗಿರುವುದು**
ಸತ್ಯ ಅಥವಾ ಸರಿಯೆಂದು ಸಾಬೀತುಪಡಿಸಬಹುದಾದ ಅಥವಾ ತೋರಿಸಬಹುದಾದ ವಿಷಯ.

**ವಂಚನೆ**
ಸುಳ್ಳು; ಯಾರನ್ನಾದರೂ ಮೂರ್ಖರನ್ನಾಗಿಸುವ, ಮೋಸಗೊಳಿಸುವ ಅಥವಾ ದಾರಿ ತಪ್ಪಿಸುವ ಹಾಗೆ ವಿನ್ಯಾಸಗೊಳಿಸಲಾಗಿರುವ ಒಂದು ಕ್ರಿಯೆ ಅಥವಾ ಸಂದೇಶ.

**ದುರ್ಬಳಕೆ ಮಾಡುವುದು**
ಒಬ್ಬ ವ್ಯಕ್ತಿ ಅಥವಾ ಕೆಲವು ಜನರು, ಮತ್ತೊಬ್ಬ ವ್ಯಕ್ತಿಯನ್ನು ಅಥವಾ ಸನ್ನಿವೇಶವನ್ನು ಅನ್ಯಾಯದಿಂದ, ಅಪ್ರಾಮಾಣಿಕವಾಗಿ ಅಥವಾ ಬೆದರಿಕೆಯ ರೂಪದಲ್ಲಿ ನಿಯಂತ್ರಿಸುವುದು ಅಥವಾ ಪ್ರಭಾವ ಬೀರುವುದು. ದುರ್ಬಳಕೆ ಮಾಡುವುದು ಎಂದರೆ ನಿಜವಲ್ಲದ ಯಾವುದೋ ಸಂಗತಿಯನ್ನು ನೀವು ನಂಬುವ ಹಾಗೆ ಮಾಡಲು ಮಾಹಿತಿ, ಡೇಟಾ ಅಥವಾ ಚಿತ್ರಗಳನ್ನು ಎಡಿಟ್ ಮಾಡುವುದು ಅಥವಾ ಸಂದರ್ಭವನ್ನು ತಿರುಚಿ ಪ್ರಸ್ತುತಪಡಿಸುವುದು.

## ಕುಟುಂಬ ಚಟುವಟಿಕೆ

### ಜಾಣತನದಿಂದ ವೆಬ್ ಹುಡುಕಾಟ ನಡೆಸುವುದು

- ಒಂದು ಕುಟುಂಬವಾಗಿ, ಟ್ಯಾಬ್ಲೆಟ್ ಅಥವಾ ಕಂಪ್ಯೂಟರ್ (ಮೊಬೈಲ್ ಫೋನ್ ಕೂಡಾ ಆಗಬಹುದು - ಎಲ್ಲರೂ ಒಟ್ಟಿಗೆ ಸ್ಕ್ರೀನ್ ನೋಡಲು ಸ್ವಲ್ಪ ಕಷ್ಟವಾಗಬಹುದು, ಅಷ್ಟೇ) ಇರಿಸಿಕೊಂಡು ಒಟ್ಟಿಗೆ ಕುಳಿತುಕೊಳ್ಳಿ ಮತ್ತು ನಿಮ್ಮ ಮೆಚ್ಚಿನ ಹುಡುಕಾಟ ಎಂಜಿನ್‌ನ ಮುಖಪುಟಕ್ಕೆ ಹೋಗಿ.
- ಸುರಕ್ಷಿತ ಹುಡುಕಾಟದ ಫೀಚರ್ ಆನ್ ಆಗಿದೆಯೇ ಎಂದು ನೋಡಿ. (ಇದು ಸಾಮಾನ್ಯವಾಗಿ ನಿಮ್ಮ ಹುಡುಕಾಟ ಎಂಜಿನ್‌ನ "ಸೆಟ್ಟಿಂಗ್‌ಗಳು" ಅಥವಾ "ಆದ್ಯತೆಗಳು" ಎಂಬಲ್ಲಿ ಕಾಣಸಿಗುತ್ತದೆ.)
- ನಿಮ್ಮ ಮಗುವಿಗೆ ಆಸಕ್ತಿ ಇರುವ ಒಂದು ವಿಷಯವನ್ನು ಆಯ್ಕೆ ಮಾಡಿ (ವೃತ್ತಿಪರ ಕ್ರೀಡಾಪಟು, ಅವರ ಮೆಚ್ಚಿನ ಉದ್ದೇಶ, ನಟ ಅಥವಾ ಸಂಗೀತ ಕಲಾವಿದ, ಜನಪ್ರಿಯ ಚಲನಚಿತ್ರ ಅಥವಾ ಲೇಖಕ ಇತ್ಯಾದಿ.) ಮತ್ತು ಅದನ್ನು ಹುಡುಕಾಟ ಬಾಕ್ಸ್‌ನಲ್ಲಿ ಟೈಪ್ ಮಾಡಿ.

ಪ್ರಥಮ ಸಾಲಿನಲ್ಲಿ ಕಾಣಿಸಿಕೊಳ್ಳುವ ಫಲಿತಾಂಶಗಳಿಂದ ಹಿಡಿದು ಹಲವಾರು ಪುಟಗಳ ನಂತರ ಕಂಡುಬರುವ ಫಲಿತಾಂಶಗಳಿಂದಲೂ ವಿವಿಧ ಫಲಿತಾಂಶಗಳನ್ನು ಕ್ಲಿಕ್ ಮಾಡಿ. ಮೊದಲ ಸಾಲಿನಲ್ಲಿ ಕಾಣಿಸಿಕೊಂಡ ಫಲಿತಾಂಶಗಳು ಮತ್ತು ಹಲವಾರು ಪುಟಗಳ ನಂತರ ಕಾಣಿಸಿಕೊಂಡ ಫಲಿತಾಂಶಗಳ ಕುರಿತು ಅವರಿಗೆ ಏನನಿಸುತ್ತದೆ ಎಂದು ಕೇಳಿ. ಅವರಿಗೆ ಒಂದರ ಮೇಲೆ ಮತ್ತೊಂದಕ್ಕಿಂತ ಹೆಚ್ಚು ಭರವಸೆ ಇದೆಯೇ? ಹೌದು ಎಂದಾದರೆ ಏಕೆ ಅಥವಾ ಇಲ್ಲ ಎಂದಾದರೆ ಏಕೆ?

- ನೀವು ಅಥವಾ ನಿಮ್ಮ ಮಕ್ಕಳು ಕ್ಲಿಕ್ ಮಾಡದಿರುವ ಯಾವುದಾದರೂ ಫಲಿತಾಂಶಗಳಿವೆಯೇ? ಏಕೆ? (ಅವುಗಳು "ಪ್ರಾಯೋಜಿತವಾಗಿವೆಯೇ" ಅಥವಾ ಜಾಹೀರಾತುಗಳೇ? ನೀವು ಅವುಗಳನ್ನು ಏಕೆ ಕ್ಲಿಕ್ ಮಾಡುತ್ತೀರಿ/ಮಾಡುವುದಿಲ್ಲ?ನೀವು ದೂರವಿಡುವ ಯಾವುದಾದರೂ ಮೂಲಗಳಿವೆಯೇ? ಏಕೆ?)

- ಮೂಲ ಮತ್ತು ಮಾಹಿತಿಯ ಗುಣಮಟ್ಟ, ಸೈಟ್‌ನ "ಕುರಿತು" ಪುಟ ಇತ್ಯಾದಿಗಳ ಬಗ್ಗೆ ಮಾತನಾಡಿ.

- ನೀವು ಪರಸ್ಪರ ಕೇಳಿಕೊಳ್ಳಬಹುದಾದ ಪ್ರಶ್ನೆಗಳ ಕೆಲವು ಉದಾಹರಣೆಗಳು ಇಲ್ಲಿವೆ: ನೀವು ಒಬ್ಬ ಸೆಲೆಬ್ರಿಟಿ ಕಲಾವಿದ ಅಥವಾ ಕ್ರೀಡಾಪಟುವನ್ನು ಹುಡುಕಿದ್ದರೆ, ಕಂಟೆಂಟ್ ಸಕಾರಾತ್ಮಕವಾಗಿದೆಯೇ (ಮತ್ತು ಹಾಗಿದ್ದರೆ ಅವರ ಪ್ರಾಯೋಜಕರು ಅಥವಾ ಅಭಿಮಾನಿಯಾಗಿರಬಹುದೇ)? ಮಾಹಿತಿಯು ನಕಾರಾತ್ಮಕ ಅಥವಾ ವಿಮರ್ಶಾತ್ಮಕವಾಗಿದ್ದರೆ, ಆ ವಿಮರ್ಶೆಯ ಮೂಲದ ಕುರಿತು ನೀವೇನಾದರೂ ಕಂಡುಹಿಡಿಯಲು ಸಾಧ್ಯವೇ? ("ನಮ್ಮ ಕುರಿತು" ಪುಟ, ಸೈಟ್‌ನ ಮಾಲೀಕರ ಹಿನ್ನೆಲೆ ಅಥವಾ ರುಜುವಾತುಗಳ ಕುರಿತು ಮಾಹಿತಿ?) ಸಕಾರಾತ್ಮಕವಾಗಿರಲಿ ಅಥವಾ ನಕಾರಾತ್ಮಕವಾಗಿರಲಿ, ತಾವು ಮಾತಾನಾಡುತ್ತಿರುವ ವಿಷಯದ ಕುರಿತು ಈ ಮೂಲಗಳಿಗೆ ನಿಜವಾಗಿಯೂ ತಿಳಿದಿದೆಯೇ ಅಥವಾ ಅವರು ಕೇವಲ ಅಭಿಪ್ರಾಯವನ್ನು ಹಂಚಿಕೊಳ್ಳುತ್ತಿದ್ದಾರೆಯೇ? ಇದು ಒಂದು ಸುದ್ದಿ ಸೈಟ್ ಆಗಿದ್ದರೆ, ನೀವು ನಂಬಬಹುದೆಂದು ಅನಿಸುವ ಹಾಗಿದೆಯೇ ಮತ್ತು ಜನಪ್ರಿಯವಾಗಿದೆಯೇ? ಇಲ್ಲದಿದ್ದರೆ, ನೀವು ಇದರ ಬಗ್ಗೆ ಒಂದು ಹುಡುಕಾಟ ನಡೆಸಬಹುದು ಮತ್ತು ಇದು ಸಂತುಲಿತ ರೀತಿಯಲ್ಲಿ ಮಾಹಿತಿಯನ್ನು ಪ್ರಸ್ತುತಪಡಿಸಲು ಪ್ರಯತ್ನಿಸುತ್ತದೆ ಎಂದು ಜನರಿಗೆ ಅನಿಸುತ್ತದೆಯೇ ಎಂದು ನೋಡಬಹುದು.

- ಒಂದು ಕುಟುಂಬವಾಗಿ, ನಿಮ್ಮದೇ ಪ್ರಶ್ನೆಗಳ ಬಗ್ಗೆ ನೀವು ಆಲೋಚಿಸಬಹುದು - ಪ್ರಶ್ನೆ ಒಳ್ಳೆಯದು! ಆನ್‌ಲೈನ್ ಹುಡುಕಾಟಗಳಲ್ಲಿ ನಾವು ಕಂಡುಕೊಳ್ಳುವ ವಿಷಯದ ಕುರಿತು ವಿಮರ್ಶಾತ್ಮಕವಾಗಿ ಆಲೋಚಿಸುವುದು ಡಿಜಿಟಲ್ ಸಾಕ್ಷರತೆಯ ತಳಹದಿಯಾಗಿದೆ ಮತ್ತು ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರುವುದಕ್ಕೆ ಮುಖ್ಯವಾದ ಪ್ರಥಮ ಹಂತವಾಗಿದೆ.




### ರಿಯಾಲಿಟಿ ರಿವರ್

ಇದೀಗ ನೀವು ಆನ್‌ಲೈನ್‌ನಲ್ಲಿ ಎಚ್ಚರಿಕೆಯಿಂದಿರುವುದು ಹೇಗೆ ಎಂಬುದನ್ನು ಕಲಿತಿರುವ ಕಾರಣ , ನಿಮ್ಮ ಕೌಶಲ್ಯಗಳನ್ನು ಪರೀಕ್ಷಿಸಿ ನೋಡಿ. ಈ ನದಿಯು ಇಂಟರ್‌ಲ್ಯಾಂಡ್‌ನಲ್ಲಿ ಹರಿಯುತ್ತದೆ ಮತ್ತು ವಾಸ್ತವಾಂಶ ಹಾಗೂ ಕಾಲ್ಪನಿಕ ಅಂಶಗಳನ್ನು ಹೊಂದಿದೆ. ಆದರೆ, ವಿಷಯಗಳು ಕಣ್ಣಿಗೆ ಕಾಣಿಸಿದಷ್ಟು ಸೀದಾ ಆಗಿರುವುದಿಲ್ಲ. ರಭಸದ ಪ್ರವಾಹಗಳನ್ನು ದಾಟಲು ನಿಮ್ಮ ಅತ್ಯುತ್ತಮ ವಿವೇಚನೆಯನ್ನು ಬಳಸಿ.

ನಿಮ್ಮ ಡೆಸ್ಕ್‌ಟಾಪ್ ಅಥವಾ ಮೊಬೈಲ್ ಸಾಧನದಲ್ಲಿ ವೆಬ್ ಬ್ರೌಸರ್ ತೆರೆಯಿರಿ ಮತ್ತು **g.co/RealityRiver** ಗೆ ಭೇಟಿ ನೀಡಿ

# ನಿಮ್ಮ ರಹಸ್ಯಗಳನ್ನು ಸುರಕ್ಷಿತವಾಗಿರಿಸಿ

ನಿಮ್ಮ ಮಾಹಿತಿ, ಖಾತೆಗಳು ಮತ್ತು ಸಾಧನಗಳ ಸುರಕ್ಷತೆಯೂ ಸಹ ನಿಮ್ಮ ಗೌಪ್ಯತೆಯಷ್ಟೇ ಮುಖ್ಯವಾಗಿದೆ. ಸದೃಢ ಪಾಸ್‌ವರ್ಡ್‌ಗಳು ಮತ್ತು ಅವುಗಳನ್ನು ಹಂಚಿಕೊಳ್ಳದಿರುವ ಬದ್ಧತೆಯು, ನಿಮ್ಮ ಕುಟುಂಬದ ಸಾಧನಗಳು, ಗುರುತುಗಳು, ಗೌರವ ಮತ್ತು ಸಂಬಂಧಗಳನ್ನು ಕಾಪಾಡಿಕೊಳ್ಳುವುದಕ್ಕೆ ಮುಖ್ಯವಾಗಿದೆ.



## ಗುರಿಗಳು

- ಡಿಜಿಟಲ್ ಸುರಕ್ಷತೆಯು ಏಕೆ ಮುಖ್ಯವಾಗಿದೆ ಮತ್ತು ಇದನ್ನು ಸಾಧ್ಯವಾಗಿಸುವುದು ಹೇಗೆ ಎಂಬುದನ್ನು **ಅರ್ಥಮಾಡಿಕೊಳ್ಳುವುದು**.
- ಸದೃಢ ಪಾಸ್‌ವರ್ಡ್‌ಗಳನ್ನು ರಚಿಸುವುದು ಹೇಗೆ ಎಂಬುದನ್ನು **ಕಲಿಯುವುದು**.

## ನೀವು ಪ್ರಾರಂಭಿಸುವ ಮೊದಲು

2017ನೇ ಇಸವಿಯಲ್ಲಿ, ಜನರು ಬಳಸಿದ ಎರಡು ಸಾಮಾನ್ಯ ಪಾಸ್‌ವರ್ಡ್‌ಗಳು “123456” ಮತ್ತು “password” ಎಂದು ನಿಮಗೆ ತಿಳಿದಿತ್ತೇ? ಪಾಸ್‌ವರ್ಡ್‌ಗಳು ನಮ್ಮ ವೈಯಕ್ತಿಕ ಸುರಕ್ಷತೆ, ಸಾಧನಗಳು, ಗುರುತುಗಳು, ಗೌರವ ಮತ್ತು ಸಂಬಂಧಗಳನ್ನು ಕಾಪಾಡುತ್ತವೆ ಮತ್ತು ದುರ್ಬಲ ಪಾಸ್‌ವರ್ಡ್‌ಗಳು, ನಮ್ಮ ಮಾಹಿತಿಯನ್ನು ಕ್ರಿಮಿನಲ್‌ಗಳು ಪಡೆದುಕೊಳ್ಳುವುದಕ್ಕೆ ಸಹಾಯ ಮಾಡುತ್ತವೆ. ನಮ್ಮ ಮಕ್ಕಳಿಗೆ ನಾವು ಕಲಿಸಬಹುದಾದ ಅತ್ಯಂತ ಮೂಲಭೂತ ವಿಷಯವೆಂದರೆ, ಸದೃಢ ಪಾಸ್‌ವರ್ಡ್‌ಗಳನ್ನು ಹೇಗೆ ರಚಿಸುವುದು ಎಂಬ ವಿಷಯ.

ನಮ್ಮ ಪಾಸ್‌ವರ್ಡ್‌ಗಳನ್ನು ಸದೃಢಗೊಳಿಸಲು ಮತ್ತು ಸದೃಢವಾಗಿಯೇ ಇರಿಸಲು ಅತ್ಯುತ್ತಮ ಸಲಹೆಗಳು ಹೀಗಿವೆ:

- ಅವು ನೆನಪಿಟ್ಟುಕೊಳ್ಳಲು ಸಾಧ್ಯವಾಗುವ ಹಾಗೆ ಇರಲಿ, ಆದರೆ ಜನ್ಮದಿನಗಳು ಅಥವಾ ಸಾಕುಪ್ರಾಣಿಗಳ ಹೆಸರುಗಳಂತಹ ವೈಯಕ್ತಿಕ ಮಾಹಿತಿಯ ಬಳಕೆಯನ್ನು ತಪ್ಪಿಸಿ.
- ಅಪ್ಪರ್‌ಕೇಸ್ ಅಕ್ಷರಗಳು, ಲೋವರ್‌ಕೇಸ್ ಅಕ್ಷರಗಳು, ಸಂಕೇತಗಳು ಮತ್ತು ಸಂಖ್ಯೆಗಳ ಸಂಯೋಜನೆಯನ್ನು ಬಳಸಿ.
- ಅಕ್ಷರಗಳ ಬದಲಿಗೆ ಸಂಖ್ಯೆಗಳು ಮತ್ತು ಸಂಕೇತಗಳನ್ನು ಈ ರೀತಿ ಬಳಸಿ: le++ers wit# sYmb0ls & n^mb3rs. (ಇದರಿಂದ ಎರಡು ರೀತಿಯ ಉಪಯೋಗಗಳಿವೆ: ಇದರಿಂದ ಪಾಸ್‌ವರ್ಡ್ ಅನ್ನು ನೆನಪಿಟ್ಟುಕೊಳ್ಳಲು ಸುಲಭವಾಗುತ್ತದೆ ಮತ್ತು ಪ್ರೋಗ್ರಾಂ ಮೂಲಕ ಇದನ್ನು ಭೇದಿಸಲು ಕಷ್ಟವಾಗುತ್ತದೆ)
- ಎಂಟು ಅಥವಾ ಹೆಚ್ಚು ಕ್ಯಾರೆಕ್ಟರ್‌ಗಳು - ದೀರ್ಘವಿದ್ದಷ್ಟು ಉತ್ತಮ. ಅವುಗಳನ್ನು ಅದಲು-ಬದಲು ಮಾಡಿ - ವಿವಿಧ ಸೈಟ್‌ಗಳು ಹಾಗೂ ಸಾಧನಗಳಲ್ಲಿ ಒಂದೇ ಪಾಸ್‌ವರ್ಡ್ ಅನ್ನು ಬಳಸಬೇಡಿ, ಆದರೆ ವಿವಿಧ ಖಾತೆಗಳಿಗಾಗಿ ನೀವು ಒಂದೇ ಪಾಸ್‌ವರ್ಡ್ ಅನ್ನು ಕೊಂಚ ವ್ಯತ್ಯಾಸಗೊಳಿಸಿ ಬಳಸಬಹುದು.
- ನಿಮ್ಮ ಸಾಧನಗಳಲ್ಲಿ ಯಾವಾಗಲೂ ಸ್ಕ್ರೀನ್‌ಲಾಕ್‌ಗಳನ್ನು ಬಳಸಿ.
- ಪಾಸ್‌ವರ್ಡ್ ನಿರ್ವಾಹಕವನ್ನು ಬಳಸುವುದನ್ನು ಪರಿಗಣಿಸಿ: ನೀವು ಒಂದೆರಡು ಪಾಸ್‌ವರ್ಡ್‌ಗಳನ್ನು ಮರೆತರೆ, ನೆನಪಿಟ್ಟುಕೊಳ್ಳಲು ಸಹಾಯ ಮಾಡುವ ಆ್ಯಪ್ ಅಥವಾ ಪರಿಕರ ಇದಾಗಿದೆ (ಹೆಚ್ಚಿನ ಬ್ರೌಸರ್‌ಗಳಲ್ಲಿ, ಇದನ್ನು ಮಾಡಲು ಒಂದು ಸುರಕ್ಷತಾ ಫೀಚರ್ ಇರುತ್ತದೆ).

## ಪದಪಟ್ಟಿ

### ಭದ್ರತೆ

ಜನರ ಸಾಧನಗಳು ಮತ್ತು ಅವುಗಳಲ್ಲಿನ ಸಾಫ್ಟ್‌ವೇರ್ ಹಾಗೂ ಮಾಹಿತಿಯನ್ನು ರಕ್ಷಿಸುವುದು.

### ಪಾಸ್‌ವರ್ಡ್ ಅಥವಾ ಪಾಸ್‌ಕೋಡ್

ಯಾವುದಕ್ಕಾದರೂ ಪ್ರವೇಶ ಪಡೆಯುವುದಕ್ಕಾಗಿ ಬಳಸಲಾಗುವ ಅಕ್ಷರಗಳು, ಸಂಖ್ಯೆಗಳು ಮತ್ತು ಸಂಕೇತಗಳ ಒಂದು ರಹಸ್ಯ ಸಂಯೋಜನೆ. ಇದು ವಿವಿಧ ರೂಪಗಳಲ್ಲಿರಬಹುದು; ಉದಾಹರಣೆಗೆ, ನಿಮ್ಮ ಫೋನ್ ಅಥವಾ ಟ್ಯಾಬ್ಲೆಟ್ ಅನ್ನು ಲಾಕ್ ಮಾಡಲು ನಾಲ್ಕು ಅಂಕಿಗಳು-ಮಾತ್ರ ಇರುವ ಕೋಡ್ ಅನ್ನು ನೀವು ಹೊಂದಿರಬಹುದು ಅಥವಾ ನಿಮ್ಮ ಇಮೇಲ್, ಸಾಮಾಜಿಕ ಮಾಧ್ಯಮ ಅಥವಾ ಬ್ಯಾಂಕ್ ಖಾತೆಗಾಗಿ ಹೆಚ್ಚು ಸಂಕೀರ್ಣ ಪಾಸ್‌ವರ್ಡ್ ಅನ್ನು ನೀವು ಹೊಂದಿರಬಹುದು. ಸಾಮಾನ್ಯವಾಗಿ, ನಿಮ್ಮ ಪಾಸ್‌ವರ್ಡ್‌ಗಳನ್ನು ನೀವು ಸಾಧ್ಯವಾದಷ್ಟು ಸಂಕೀರ್ಣಗೊಳಿಸಬೇಕು, ಆದರೆ ಅವು ನೆನಪು ಮಾಡಿಕೊಳ್ಳಲು ಸಾಧ್ಯವಾಗುವ ಹಾಗೆಯೂ ಇರಬೇಕು.

### ಎರಡು-ಹಂತದ ಪರಿಶೀಲನೆ

(ಎರಡು-ಅಂಶಗಳ ಪರಿಶೀಲನೆ ಮತ್ತು ಎರಡು-ಹಂತದ ದೃಢೀಕರಣ ಎಂದೂ ಸಹ ಕರೆಯಲಾಗುತ್ತದೆ)

ಕೇವಲ ಪಾಸ್‌ವರ್ಡ್ ಹಾಗೂ ಬಳಕೆದಾರರ ಹೆಸರು ಮಾತ್ರವಲ್ಲದೆ, ನೀವು - ಮತ್ತು ನೀವು ಮಾತ್ರ - ದೈಹಿಕವಾಗಿ ಹೊಂದಿರುವ ಯಾವುದೋ ವಿಷಯದ ಅಗತ್ಯವಿರುವ ಸುರಕ್ಷತಾ ಪ್ರಕ್ರಿಯೆ; ಇದರಿಂದ ಸಂಭಾವ್ಯ ದಾಳಿಕೋರರಿಗೆ ಒಬ್ಬ ವ್ಯಕ್ತಿಯ ಡೇಟಾ ಅಥವಾ ಗುರುತಿಗೆ ಪ್ರವೇಶ ಪಡೆಯಲು (ಅಥವಾ ಅದನ್ನು ಕದಿಯಲು) ಕಷ್ಟವಾಗುತ್ತದೆ. ಇದಕ್ಕೆ ಒಂದು ಉದಾಹರಣೆಯೆಂದರೆ, ನೀವು ಪಾಸ್‌ವರ್ಡ್ ನಮೂದಿಸಿದ ಬಳಿಕ ನಿಮ್ಮ ಫೋನ್ ಅಥವಾ ಇಮೇಲ್‌ಗೆ ಕಳುಹಿಸಲಾಗುವ ಸಮಯ-ನಿರ್ಬಂಧಿತ ಕೋಡ್ ಅನ್ನು ನಮೂದಿಸಬೇಕಾದ ಅಗತ್ಯವಿರುವ ಒಂದು ಖಾತೆ.

### ಎನ್‌ಕ್ರಿಪ್ಶನ್

ಡೇಟಾವನ್ನು ಗೋಜಲುಗೊಳಿಸುವ ಮೂಲಕ ಮತ್ತು ಡೀಕೋಡ್ ಮಾಡಲು ಕಠಿಣಗೊಳಿಸುವ ಮೂಲಕ, ಮಾಹಿತಿಯನ್ನು (ನೀವು ಆನ್‌ಲೈನ್ ನಲ್ಲಿ ಕಳುಹಿಸುವ ಸಂದೇಶಗಳ ಹಾಗೆ) ಸುರಕ್ಷಿತವಾಗಿರಿಸಲು ಸಹಾಯ ಮಾಡುವ ಒಂದು ಪ್ರಕ್ರಿಯೆ.

### ಸಂಕೀರ್ಣತೆ

ಸುರಕ್ಷಿತ ಪಾಸ್‌ವರ್ಡ್ ರಚಿಸುವುದಕ್ಕಾಗಿ ಇರುವ ಗುರಿ. ಪಾಸ್‌ವರ್ಡ್‌ನಲ್ಲಿ ಸಂಖ್ಯೆಗಳು, ವಿಶೇಷ ಕ್ಯಾರೆಕ್ಟರ್‌ಗಳು ("$" ಅಥವಾ "&" ಹಾಗೆ), ಮತ್ತು ಲೋವರ್‌ಕೇಸ್ ಹಾಗೂ ಅಪ್ಪರ್ ಕೇಸ್ ಅಕ್ಷರಗಳಿದ್ದಾಗ, ಪಾಸ್‌ವರ್ಡ್ ಸಂಕೀರ್ಣವಾಗಿದೆ ಎಂದು ಪರಿಗಣಿಸಲಾಗುತ್ತದೆ. ಉದ್ದವೂ (ಕ್ಯಾರೆಕ್ಟರ್‌ಗಳ ಸಂಖ್ಯೆ) ಸಹ ಸಂಕೀರ್ಣತೆಯನ್ನು ಹೆಚ್ಚಿಸುತ್ತದೆ.

### ಹ್ಯಾಕರ್

ಇತರ ಜನರ ಅಥವಾ ಸಂಸ್ಥೆಗಳ ಸಾಧನಗಳು ಮತ್ತು ಡೇಟಾಕ್ಕೆ ಅನಧಿಕೃತ ಪ್ರವೇಶ ಪಡೆಯಲು ಕಂಪ್ಯೂಟರ್‌ಗಳನ್ನು ಬಳಸುವ ವ್ಯಕ್ತಿ.

## ಕುಟುಂಬ ಚಟುವಟಿಕೆ

### ಜೊತೆಗೂಡಿ ಒಂದು ಸದೃಢ ಪಾಸ್‌ವರ್ಡ್ ಅನ್ನು ರಚಿಸಿ

**ಈ ಕೆಳಗಿನ ಚಟುವಟಿಕೆಯನ್ನು ನೀವು ಪ್ರಾರಂಭಿಸುವ ಮೊದಲು ಒಂದು ಸೂಚನೆ:**

ಇದು ಸಂಪೂರ್ಣ ಕುಟುಂಬಕ್ಕೆ ಅನ್ವಯಿಸುವ ಅಭ್ಯಾಸವಾಗಿದೆ, ಆದರೆ ನೀವು ಆಟಕ್ಕೆ ಸೀಮಿತವಾದ ಪಾಸ್‌ವರ್ಡ್ ರಚಿಸಬೇಕು ಎಂದು ನಾವು ಶಿಫಾರಸು ಮಾಡುತ್ತೇವೆ. ಏಕೆ? ಏಕೆಂದರೆ, ಪಾಸ್‌ವರ್ಡ್‌ಗಳನ್ನು ಹಂಚಿಕೊಳ್ಳಬಾರದು ಎಂಬ ಕಲ್ಪನೆಗೆ ಒಗ್ಗಿಕೊಳ್ಳುವುದು ಒಳ್ಳೆಯ ಉಪಾಯವಾಗಿದೆ. ಫುಲ್ ಸ್ಟಾಪ್. BFF ಗಳೊಂದಿಗೆ, ಫಸ್ಟ್ ಕಸಿನ್‌ಗಳೊಂದಿಗೆ ಅಥವಾ ನಿಕಟ ಕುಟುಂಬದ ಸದಸ್ಯರೊಂದಿಗೂ ಕೂಡಾ ಹಂಚಿಕೊಳ್ಳಬಾರದು. ಅವು ವೈಯಕ್ತಿಕವಾಗಿವೆ.

ಅವು ಕೆಲವು ಜನರಿಗಾಗಿ (ತಂದೆ-ತಾಯಿಯ ಹಾಗೆ) ಅನುಮತಿಗಳನ್ನು ಕಾಪಾಡುತ್ತವೆ ಮತ್ತು ಕೆಲವು ಜನರಿಗಾಗಿ (ಮಕ್ಕಳ ಹಾಗೆ) ಅನುಮತಿಗಳನ್ನು ಕಾಪಾಡುವುದಿಲ್ಲ. ಇತರರು ನಿಮ್ಮ ಮೇಲೆ ಪ್ರ್ಯಾಂಕ್

ಮಾಡದ ಹಾಗೆ, ನಿಮ್ಮ ಹಾಗೆ ಸೋಗು ಹಾಕದಂತೆ, ನಿಮಗೆ ಮುಜುಗರ ಉಂಟುಮಾಡಲು ನಿಮ್ಮ ಸಾಧನವನ್ನು ಬಳಸದಂತೆ ಅಥವಾ ನಿಮ್ಮ ಕುರಿತಾಗಿ ನಕಲಿ ಪ್ರೊಫೈಲ್‌ಗಳನ್ನು ಬಳಸದಂತೆ ರಕ್ಷಿಸುತ್ತವೆ.

1. ನೀವು ನೆನಪಿಟ್ಟುಕೊಳ್ಳಬಹುದಾದ ಒಂದು ತಮಾಷೆಯ ನುಡಿಗಟ್ಟು ಅಥವಾ ಘಟನೆಯ ಬಗ್ಗೆ ಯೋಚಿಸಿ. ಇದು ನಿಮ್ಮ ಕುಟುಂಬದ ಮೆಚ್ಚಿನ ಚಲನಚಿತ್ರ, ಮಕ್ಕಳ ಪುಸ್ತಕ, ನಿಮ್ಮ ಮಗು ಅಥವಾ ಮಕ್ಕಳು ಯಾವಾಗ ಮತ್ತು ಯಾವ ಹೈಸ್ಕೂಲ್‌ನಲ್ಲಿ ಕಲಿಯಬಹುದು ಇತ್ಯಾದಿ ವಿಷಯಗಳಾಗಿರಬಹುದು, **ಉದಾಹರಣೆಗೆ:** Shanaya Roy will graduate from Delhi Public School in 2023.

2. ಈ ನುಡಿಗಟ್ಟು ಅಥವಾ ಶೀರ್ಷಿಕೆಯ ಕೆಲವು ಪದಗಳು ಅಥವಾ ಎಲ್ಲಾ ಪದಗಳ ಮೊದಲ ಅಕ್ಷರಗಳನ್ನು ಬಳಸಿ. **ಉದಾಹರಣೆ:** SRoywgfDPublicS23

3. ಕೆಲವು ಅಕ್ಷರಗಳನ್ನು ಸಂಖ್ಯೆಗಳು ಹಾಗೂ ಕೆಲವನ್ನು ಸಂಕೇತಗಳೊಂದಿಗೆ ಬದಲಾಯಿಸಿ **ಉದಾಹರಣೆಗೆ:** 3RoywgfDPubl1c$23

4. ಕೆಲವು ಅಕ್ಷರಗಳನ್ನು ಅಪ್ಪರ್‌ಕೇಸ್ ಮತ್ತು ಕೆಲವನ್ನು ಲೋವರ್‌ಕೇಸ್ ಮಾಡಿ **ಉದಾಹರಣೆ:** 3ROYwgfDPubl1c$23

ನೀವು ಈಗ ಸಿದ್ಧರಾಗಿದ್ದೀರಿ! ನೀವು ಜೊತೆಗೂಡಿ ಅತ್ಯಂತ ಸದೃಢ ಪಾಸ್‌ವರ್ಡ್ ಅನ್ನು ರಚಿಸಿದ್ದೀರಿ.

**ಮುಂದೆ:** ಎಲ್ಲರೂ ಸಹ ತಮ್ಮ ಪಾಸ್‌ವರ್ಡ್‌ಗಳನ್ನು ಅತ್ಯಂತ ಪ್ರಬಲಗೊಳಿಸಲು, ನಿಯಮಿತವಾಗಿ ಪರಿಶೀಲಿಸಲು ಮತ್ತು ಎಲ್ಲರೊಂದಿಗೆ ಹಂಚಿಕೊಳ್ಳದಿರಲು ಬದ್ಧರಾಗಬೇಕು. ನೀವು ಸಾಧನಗಳನ್ನು ಹಂಚಿಕೊಳ್ಳುತ್ತೀರಿ ಎಂದಾದರೆ, ಯಾವ ಸಾಧನಕ್ಕೆ (ಮತ್ತು ಅದರ ಪಾಸ್‌ವರ್ಡ್‌ಗೆ) ಯಾರು "ಮಾಲೀಕರು" ಎಂಬುದನ್ನು ನಿರ್ಧರಿಸಿ. "ತಮ್ಮದು" ಅಲ್ಲದ ಸಾಧನವನ್ನು ಯಾರಾದರೂ ಬಳಸಬೇಕಾಗಿ ಬಂದಾಗ, ಅದನ್ನು ಅನ್‌ಲಾಕ್ ಮಾಡಲು ಅದರ ಮಾಲೀಕರ ಬಳಿ ಕೇಳಿಕೊಳ್ಳಬೇಕು.




### ಟವರ್ ಆಫ್ ಟ್ರೆಷರ್

ಇದೀಗ ನಿಮ್ಮ ಮಾಹಿತಿಯನ್ನು ಕಾಪಾಡಿಕೊಳ್ಳಲು ನೀವು ಕಲಿತಿರುವುದರಿಂದ, ಆನ್‌ಲೈನ್‌ನಲ್ಲಿ ಸದೃಢರಾಗಿರಲು ಅಗತ್ಯವಾಗಿರುವ ಗುಣಗಳು ನಿಮ್ಮಲ್ಲಿವೆಯೇ ಎಂದು ನೋಡೋಣ. ಕಾಪಾಡಿ! ಟವರ್ ಆಫ್ ಟ್ರೆಷರ್, ಅನ್‌ಲಾಕ್ ಆಗಿದೆ ಮತ್ತು ಇಂಟರ್‌ನಾಟ್‌ನ ಅಮೂಲ್ಯ ವಸ್ತುಗಳು (ಸಂಪರ್ಕ ಮಾಹಿತಿ ಹಾಗೂ ಖಾಸಗಿ ಸಂದೇಶಗಳಂಥವು) ಅತ್ಯಧಿಕ ಅಪಾಯವನ್ನು ಎದುರಿಸುತ್ತಿವೆ!

ಹ್ಯಾಕರ್ ಅನ್ನು ಹಿಮ್ಮೆಟ್ಟಿಸಿ ಮತ್ತು ನಿಮ್ಮ ರಹಸ್ಯಗಳನ್ನು ಶಾಶ್ವತವಾಗಿ ಸುಭದ್ರವಾಗಿರಿಸಲು ಸದೃಢ ಪಾಸ್‌ವರ್ಡ್‌ಗಳೊಂದಿಗೆ ಒಂದು ಕೋಟೆಯನ್ನು ರಚಿಸಿ.

ನಿಮ್ಮ ಡೆಸ್ಕ್‌ಟಾಪ್ ಅಥವಾ ಮೊಬೈಲ್ ಸಾಧನದಲ್ಲಿ ವೆಬ್ ಬ್ರೌಸರ್ ಅನ್ನು ತೆರೆಯಿರಿ ಮತ್ತು **g.co/TowerOfTreasure** ಗೆ ಭೇಟಿ ನೀಡಿ

# ದಯೆಯೇ ಧರ್ಮದ ಮೂಲ



ಇಂಟರ್ನೆಟ್, ಒಂದು ಅತ್ಯದ್ಭುತ ಸಂವಹನ ಸಾಧನವಾಗಿದೆ, ಮತ್ತು ಸ್ಫೂರ್ತಿದಾಯಕವಾದ ಹಾಗೂ ಪ್ರೇರೇಪಿಸುವ ಮಾಹಿತಿಯನ್ನು ಹರಡಲು ಅಥವಾ ಆಘಾತಕಾರಿ ಮತ್ತು ದ್ವೇಷಪೂರ್ಣ ಕಾಮೆಂಟರಿ ಹಾಗೂ ಅಭಿಪ್ರಾಯಗಳನ್ನು ಹರಡಲು ಅದನ್ನು ಬಳಸಬಹುದು (ಮತ್ತು ಬಳಸಲಾಗುತ್ತಿದೆ) ಎಂಬುದನ್ನು ಕಂಡುಕೊಳ್ಳಲು ನೀವು... ಇಂಟರ್ನೆಟ್ ಅನ್ನು ನೋಡಿದರೆಯೇ ತಿಳಿಯುತ್ತದೆ. ದುರದೃಷ್ಟವಶಾತ್, ಕರುಣೆ ಮತ್ತು ಕ್ರೂರತನದ ನಡುವೆ ಇಂಟರ್ನೆಟ್ ತಾನಾಗಿ ಯಾವುದೇ ತಾರತಮ್ಯ ಮಾಡುವುದಿಲ್ಲ. ಇಲ್ಲೇ ನಿಮ್ಮ ಪಾತ್ರ ಮುಖ್ಯವಾಗುತ್ತದೆ. ಮನೆಯ ಸದಸ್ಯರು ತಮ್ಮ ಮಕ್ಕಳ ಮೇಲೆ ಗಾಢವಾದ ಪ್ರಭಾವ ಬೀರುತ್ತಾರೆ ಮತ್ತು "ಇತರರು ನಿಮ್ಮೊಂದಿಗೆ ಹೇಗೆ ನಡೆದುಕೊಳ್ಳಬೇಕೆಂದು ಬಯಸುತ್ತೀರೋ, ಹಾಗೆಯೇ ನೀವು ಇತರರೊಂದಿಗೆ ನಡೆದುಕೊಳ್ಳುವ" ಮೂಲಕ, ತಮ್ಮ ಸ್ನೇಹಿತರನ್ನು ಬೆಂಬಲಿಸುವ ಮೂಲಕ, ಮತ್ತು ನಾಟಕೀಯ ಸನ್ನಿವೇಶಗಳು ಹಾಗೂ ಸೈಬರ್-ಬೆದರಿಕೆಯ ಸೊಲ್ಲಡಗಿಸುವ ಪರಿಕಲ್ಪನೆಗಳಿಗೆ ಮಾದರಿಯಾಗುವ ಮೂಲಕ, ಮಕ್ಕಳು "ಉತ್ತಮ ನೈತಿಕ ಗುಣಗಳನ್ನು ಅಳವಡಿಸಿಕೊಳ್ಳಲು" ಸಹಾಯ ಮಾಡಬಹುದು.

## ಗುರಿಗಳು

- ನಿಮ್ಮ ಕುಟುಂಬದಲ್ಲಿ ಸಕಾರಾತ್ಮಕ ವರ್ತನೆ ಎಂದರೇನು ಎಂಬುದನ್ನು **ವ್ಯಾಖ್ಯಾನಿಸುವುದು**
- ಸಕಾರಾತ್ಮಕತೆ ಎಂದರೆ ಹೇಗಿರುತ್ತದೆ ಮತ್ತು ಅದನ್ನು ಆನ್‌ಲೈನ್‌ನಲ್ಲಿ ಹಾಗೂ ಸಾಧನಗಳ ಮೂಲಕ ಹೇಗೆ ವ್ಯಕ್ತಪಡಿಸಬೇಕು ಎಂಬುದನ್ನು **ಅರ್ಥಮಾಡಿಕೊಳ್ಳುವುದು**.
- ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡುವುದರ ಬದಲಿಗೆ ಮುಖತಃ ಸಂವಹಿಸುವವರೆಗೆ ಕಾಯುವುದು ಒಳ್ಳೆಯದು ಮತ್ತು ತಂದೆ-ತಾಯಿ ಅಥವಾ ಅಣ್ಣ-ಅಕ್ಕಂದಿರ ಸಹಾಯವನ್ನು ಕೇಳುವುದು ಒಳ್ಳೆಯದು ಎಂಬಂತಹ ಸನ್ನಿವೇಶಗಳನ್ನು **ಗುರುತಿಸುವುದು**.

## ನೀವು ಪ್ರಾರಂಭಿಸುವ ಮೊದಲು

ಯಾರಾದರೂ ತಪ್ಪು ಮಾಡಿದಾಗ (ಮತ್ತು ಇದನ್ನು ಆನ್‌ಲೈನ್‌ನಲ್ಲಿ ಮಾಡುವುದು, ಅಚ್ಚರಿಯೆನಿಸುವಷ್ಟು ಸುಲಭವಾಗಿದೆ - ಉದ್ದೇಶಪೂರ್ವಕವಲ್ಲದೆಯೂ ಕೂಡಾ), ಅರ್ಥಮಾಡಿಕೊಳ್ಳಲು, ಕ್ಷಮಿಸಲು, ಮತ್ತು ತಪ್ಪುಗಳಿಂದ ಪಾಠ ಕಲಿಯಲು ಪರಸ್ಪರ ನೆರವಾಗುವುದರಲ್ಲಿ, ಬೇರೆ ಜನರಿಗಿಂತ ಮನೆಯ ಸದಸ್ಯರೇ ಹೆಚ್ಚು ಸೂಕ್ತರಾಗಿರುತ್ತಾರೆ. ಆದ್ದರಿಂದ ಆನ್‌ಲೈನ್ ಗೌರವ, ಕರುಣೆ ಮತ್ತು ಸಕಾರಾತ್ಮಕತೆಯನ್ನು ಜಾರಿಗೆ ತರಲು ನಿಮ್ಮ ಮನೆಯನ್ನು ಬಿಟ್ಟು ಬೇರೆ ಉತ್ತಮ ಸ್ಥಳವಿಲ್ಲ. ಯಾರಾದರೂ ನಿರ್ದಯತೆಯಿಂದ ವರ್ತಿಸಿದಾಗ ಮನೆಯ ಸದಸ್ಯರು ಸಹಾಯ ಮಾಡಬಹುದು (ಕೆಲವೊಮ್ಮೆ ಕೇವಲ ಆಲಿಸಿದರೂ ಸಾಕಾಗುತ್ತದೆ). ಪರಸ್ಪರರು "ಸಮರ್ಥಕರಾಗಿರಲು" ಸಹ ಅವರು ಪ್ರೋತ್ಸಾಹಿಸಬಹುದು: ಅಂದರೆ, ಕ್ರೂರ ಅಥವಾ ದುರುದ್ದೇಶಪೂರಿತ ವರ್ತನೆಗೆ ಗುರಿಯಾದ ಜನರನ್ನು ಬೆಂಬಲಿಸುವ ಮತ್ತು ಸಮರ್ಥಿಸಿಕೊಳ್ಳುವ ಜನರು.

ನೀವು ಈಗಾಗಲೇ ಇದನ್ನು ಮಾಡಿಲ್ಲ ಎಂದಾದರೆ, ಯಾವ ರೀತಿಯ ಕ್ರಮಗಳು ಮತ್ತು ವರ್ತನೆ ಮುಖ್ಯವಾಗಿವೆ ಎಂಬ ಕುರಿತು ಚರ್ಚೆ ನಡೆಸಿ - ನಿಮ್ಮ ಕುಟುಂಬವು ಜನರನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬ ಕುರಿತು ಮಾತನಾಡಿ. ಅದು ಡಿಜಿಟಲ್ ಆಗಿ ಯಾವ ರೀತಿಯಲ್ಲಿರುತ್ತದೆ ಎಂಬ ಕುರಿತು ಆಲೋಚಿಸಿ: ಪಠ್ಯಗಳು, ಪೋಸ್ಟ್‌ಗಳು, ಕಾಮೆಂಟ್‌ಗಳು, ಫೋಟೋಗಳು ಮತ್ತು ವೀಡಿಯೊಗಳು.

ಅದರಲ್ಲಿ ಸಹಾಯ ಮಾಡಲು, ಸಕಾರಾತ್ಮಕ/ನಕಾರಾತ್ಮಕ ವರ್ತನೆಯನ್ನು ಅರ್ಥಮಾಡಿಕೊಳ್ಳಲು ನಿಮಗೆ ಸಹಾಯ ಮಾಡುವುದಕ್ಕಾಗಿ ನಾವು ಪದಕೋಶದ ಕೆಲವೊಂದು ಪದಗಳನ್ನು ಒದಗಿಸಿದ್ದೇವೆ ಮತ್ತು ನಾವು ಟೈಪ್ ಮಾಡುವ ಮತ್ತು ತ್ವರಿತವಾಗಿ ಕಳುಹಿಸಿಬಿಡುವ ಪಠ್ಯ ಸಂದೇಶಗಳು ಹಾಗೂ ಇತರ ರೀತಿಯ ಡಿಜಿಟಲ್ ಸಂದೇಶಗಳ ಪರಿಣಾಮವನ್ನು ತೋರಿಸಿಕೊಡಲು ಒಂದು ಚಟುವಟಿಕೆಯನ್ನು ರಚಿಸಿದ್ದೇವೆ.

# ಪದಪಟ್ಟಿ

### ಬೆದರಿಸುವಿಕೆ

ಸಾಮಾನ್ಯವಾಗಿ ಪುನರಾವರ್ತನೆಯಾಗುವ ಉದ್ದೇಶಪೂರ್ವಕ ಕೆಟ್ಟ ವರ್ತನೆ. ಸಾಮಾನ್ಯವಾಗಿ , ಗುರಿಯಾಗಿರುವ ವ್ಯಕ್ತಿಯು ತಮ್ಮನ್ನು ರಕ್ಷಿಸಿಕೊಳ್ಳಲು ಹೆಣಗಾಡಬೇಕಾಗುತ್ತದೆ.

### ಸೈಬರ್-ಬೆದರಿಕೆ

ಆನ್‌ಲೈನ್‌ನಲ್ಲಿ ಅಥವಾ ಡಿಜಿಟಲ್ ಸಾಧನಗಳ ಬಳಕೆಯ ಮೂಲಕ ನಡೆಯುವ ಬೆದರಿಕೆ. ಸೈಬರ್-ಬೆದರಿಕೆಯಲ್ಲಿ ನಕಾರಾತ್ಮಕ, ಹಾನಿಕಾರಕ, ಸುಳ್ಳು ಅಥವಾ ಕೆಟ್ಟ ಕಂಟೆಂಟ್ ಅನ್ನು ಕಳುಹಿಸುವುದು, ಪೋಸ್ಟ್ ಮಾಡುವುದು ಅಥವಾ ಹಂಚಿಕೊಳ್ಳುವುದು ಮಾತ್ರವಲ್ಲದೆ ಬೇರೆಯವರ ಕುರಿತು ವೈಯಕ್ತಿಕ ಅಥವಾ ಖಾಸಗಿ ಮಾಹಿತಿಯನ್ನು ಹಂಚಿಕೊಂಡು ಮುಜುಗರ ಅಥವಾ ಅವಮಾನಕ್ಕೆ ಕಾರಣವಾಗುವುದು ಸಹ ಸೇರಿರುತ್ತದೆ.

### ಕಿರುಕುಳ

ಬೆದರಿಕೆಗಿಂತ ಹೆಚ್ಚು ವ್ಯಾಪಕವಾದ ಪದ ಮತ್ತು ಇದು ಹಲವಾರು ರೂಪಗಳಲ್ಲಿರಬಹುದು - ಕಾಡುವುದು, ಕಿರಿಕಿರಿ ಮಾಡುವುದು, ಹೆದರಿಸುವುದು, ಅಣಕಿಸುವುದು, ಇತ್ಯಾದಿ - ಮತ್ತು ಇದು ಆನ್‌ಲೈನ್‌ನಲ್ಲಿಯೂ ನಡೆಯಬಹುದು.

### ಸಂಘರ್ಷ

ಒಂದು ವಾದ ಅಥವಾ ಅಸಮ್ಮತಿ - ಇದು ಪುನರಾವರ್ತನೆಯಾಗಲೇಬೇಕೆಂದೇನಿಲ್ಲ.

### "ನಾಟಕ"

ವ್ಯಾಪಕವಾದ ರೀತಿಯ ವರ್ತನೆಗಳಿಗೆ ಅನ್ವಯಿಸುವ ಪದ, ಇದನ್ನು ವಯಸ್ಕರಿಗಿಂತ ಹೆಚ್ಚಾಗಿ ವಿದ್ಯಾರ್ಥಿಗಳು ಬಳಸುತ್ತಾರೆ: ಸಹಪಾಠಿಗಳ ಗಮನ ಸೆಳೆಯುವ ಮತ್ತು ಗಾಸಿಪ್ ಹರಡುವ ವರ್ತನೆಗಳಿಂದ ಪ್ರಾರಂಭಿಸಿ, ಎರಡು ಅಥವಾ ಹೆಚ್ಚಿನ ವಿದ್ಯಾರ್ಥಿಗಳ ನಡುವೆ ನಡೆಯುತ್ತಿರುವ ಸಂಘರ್ಷದವರೆಗೆ, ದೈಹಿಕವಾಗಿ ಹಾನಿಕಾರಕವಾಗಿರುವ ಅಥವಾ ಭಾವನಾತ್ಮಕವಾಗಿ ಯಾತನಾಮಯವಾಗಿರುವ ಗಂಭೀರ ಸಂಘರ್ಷ. ಇದಕ್ಕೂ ಬೆದರಿಕೆಗೂ ವ್ಯತ್ಯಾಸವೇನೆಂದರೆ, ಈ ರೀತಿಯ ಸಂಘರ್ಷದಲ್ಲಿ ಸಾಮಾನ್ಯವಾಗಿ, ಶಕ್ತಿಯ ಅಸಮತೋಲನವು ಇರುವುದಿಲ್ಲ - ಇದರಲ್ಲಿ ತೊಡಗಿಕೊಂಡಿರುವವರು ಸಾಮಾನ್ಯವಾಗಿ ಬೇರೆ ಬೇರೆ ಸಮಯಗಳಲ್ಲಿ ಬಲಿಪಶು ಹಾಗೂ ದಾಳಿಕೋರ - ಈ ಎರಡೂ ಪಾತ್ರದಲ್ಲಿರುತ್ತಾರೆ. ವರ್ತನೆಯು ಹಾನಿಕಾರಕವಲ್ಲ ಅಥವಾ ಇದು ಮುಂದಿನ ಹಂತಕ್ಕೆ ಹೋಗುವುದಿಲ್ಲ ಎಂದು ಇದರ ಅರ್ಥವಲ್ಲ. ವಿದ್ಯಾರ್ಥಿಗಳ ನಡುವಿನ "ನಾಟಕವು" "ತಣ್ಣಗಾಗಬಹುದು", ಅಥವಾ ಸಮಯ ಕಳೆದ ಹಾಗೆ ಬಗೆಹರಿಯಬಹುದು ಅಥವಾ ಬಾಹ್ಯ ಹಸ್ತಕ್ಷೇಪವು ಅಗತ್ಯವಿರಬಹುದು.

### ದಾಳಿಕೋರ

ಕಿರುಕುಳ ನೀಡುತ್ತಿರುವ ಅಥವಾ ಬೆದರಿಸುತ್ತಿರುವ ವ್ಯಕ್ತಿ; ಕೆಲವೊಮ್ಮೆ ಇವರನ್ನು "ಬುಲ್ಲಿ," ಎಂದು ಕರೆಯುತ್ತಾರೆ

### ಗುರಿ

ಬೆದರಿಕೆ, ಕಿರುಕುಳವನ್ನು ಎದುರಿಸುತ್ತಿರುವ ಅಥವಾ ಬಲಿಪಶುವಾಗಿರುವ ವ್ಯಕ್ತಿ

### ನೋಡುಗ

ಕಿರುಕುಳ ನೀಡುವುದು ಅಥವಾ ಬೆದರಿಸುವುದಕ್ಕೆ ಸಾಕ್ಷಿಯಾಗಿರುವವರು ಮತ್ತು ಆ ಸನ್ನಿವೇಶವನ್ನು ಗುರುತಿಸುವವರು, ಆದರೆ ತಮ್ಮ ಇಚ್ಛೆಯ ಪ್ರಕಾರ ಅಥವಾ ಪ್ರತೀಕಾರದ ಭಯದಿಂದಾಗಿ, ಮಧ್ಯಪ್ರವೇಶಿಸದಿರಲು ಆಯ್ಕೆ ಮಾಡುವವರು.

### ಸಮರ್ಥಕರು

ಕಿರುಕುಳ ಅಥವಾ ಬೆದರಿಕೆಗೆ ಸಾಕ್ಷಿಯಾಗಿರುವವರು, ಮತ್ತು ಗುರಿಯಾದ ವ್ಯಕ್ತಿಯನ್ನು ಖಾಸಗಿಯಾಗಿ ಅಥವಾ ಸಾರ್ವಜನಿಕವಾಗಿ ಬೆಂಬಲಿಸುವವರು, ಕೆಲವೊಮ್ಮೆಅವರು ಸಾಕ್ಷಿಯಾದ ಘಟನೆಯನ್ನು ನಿಲ್ಲಿಸಲು ಮತ್ತು/ಅಥವಾ ವರದಿ ಮಾಡಲು ಪ್ರಯತ್ನಿಸುವುದು ಸಹ ಇದರಲ್ಲಿ ಸೇರಿರುತ್ತದೆ.

### ನಿರ್ಬಂಧಿಸುವುದು

ಆನ್‌ಲೈನ್‌ನಲ್ಲಿ ಮತ್ತೊಬ್ಬ ವ್ಯಕ್ತಿಗೆ ತಿಳಿಸದೆಯೇ, ಅವರೊಂದಿಗೆ ಎಲ್ಲಾ ಸಂವಹನವನ್ನು ಕಡಿದುಕೊಳ್ಳುವುದು, ಅವರು ನಿಮ್ಮ ಪ್ರೊಫೈಲ್‌ಗೆ ಪ್ರವೇಶ ಪಡೆಯದ ಹಾಗೆ, ನಿಮಗೆ ಸಂದೇಶಗಳನ್ನು ಕಳುಹಿಸದ ಹಾಗೆ, ನಿಮ್ಮ ಪೋಸ್ಟ್‌ಗಳನ್ನು ನೋಡದ ಹಾಗೆ ತಡೆಯುವುದು, ಇತ್ಯಾದಿ. ಇದು ಆ ಬುಲ್ಲಿಯಿಂದ (ಬೆದರಿಸುವ ವ್ಯಕ್ತಿಯಿಂದ) ಆನ್‌ಲೈನ್ ಸಂಪರ್ಕವನ್ನು (ಆ ಅನಿರ್ದಿಷ್ಟ ಚಾನಲ್‌ನ ಮೂಲಕ) ಪರಿಣಾಮಕಾರಿಯಾಗಿ ನಿಲ್ಲಿಸುತ್ತದೆ, ಆದರೆ ಕಿರುಕುಳವನ್ನು ಕೊನೆಗೊಳಿಸದಿರಬಹುದು; ಬೆದರಿಕೆಯನ್ನು ಎದುರಿಸುತ್ತಿರುವ ವ್ಯಕ್ತಿಯು ಅದನ್ನು ನಿರ್ಲಕ್ಷಿಸಿದರೂ ಸಹ, ಬುಲ್ಲೀಗಳು ಮಕ್ಕಳ ಕುರಿತು ಪೋಸ್ಟ್ ಮಾಡಬಹುದು.

### ಮ್ಯೂಟ್ ಮಾಡುವುದು

ಇದು ನಿರ್ಬಂಧಿಸುವಿಕೆಯಷ್ಟು "ಅಂತಿಮ ಕ್ರಮವಲ್ಲ"; ಮ್ಯೂಟ್ ಮಾಡುವುದೆಂದರೆ, ಮತ್ತೊಬ್ಬ ವ್ಯಕ್ತಿಯೊಂದಿಗಿನ ಸಂವಹನಗಳು ಕಿರಿಕಿರಿ ಉಂಟುಮಾಡಿದಾಗ, ಆ ವ್ಯಕ್ತಿಗೆ ತಿಳಿಸದೆ ಅಥವಾ ಅವರ ಫೀಡ್‌ನಿಂದ ನೀವು ಮ್ಯೂಟ್ ಆಗದೆ ಅವರ ಪೋಸ್ಟ್‌ಗಳು, ಕಾಮೆಂಟ್‌ಗಳು ಇತ್ಯಾದಿಗಳನ್ನು ನಿಮ್ಮ ಸಾಮಾಜಿಕ ಮಾಧ್ಯಮ ಫೀಡ್‌ನಲ್ಲಿ ನೋಡುವುದನ್ನು ನಿಲ್ಲಿಸಲು ಇರುವ ಒಂದು ವಿಧಾನ (ಯಾರಾದರೂ ನಿಮ್ಮನ್ನು ಬೆದರಿಸುವುದನ್ನು ಮುಂದುವರಿಸಿದರೆ, ಅವರನ್ನು ಸಂಪೂರ್ಣವಾಗಿ ನಿರ್ಬಂಧಿಸುವುದೇ ಬಹುಶಃ ಉತ್ತಮವಾಗಿರಬಹುದು).

### ಟ್ರೋಲಿಂಗ್

ಉದ್ದೇಶಪೂರ್ವಕವಾಗಿ ಕ್ರೂರ, ಆಕ್ಷೇಪಾರ್ಹ ಅಥವಾ ಪ್ರಚೋದನಕಾರಿಯಾದ ರೀತಿಯಲ್ಲಿ ಆನ್‌ಲೈನ್‌ನಲ್ಲಿ ಪೋಸ್ಟ್ ಮಾಡುವುದು ಅಥವಾ ಕಾಮೆಂಟ್ ಮಾಡುವುದು.

### ಶೋಷಣೆಯ ಕುರಿತು ವರದಿ ಮಾಡುವುದು

ಕಿರುಕುಳ, ಬೆದರಿಕೆ, ಹೆದರಿಸುವುದು ಮತ್ತು ಒಂದು ಸೇವೆಯ ಸೇವಾ ನಿಯಮಗಳನ್ನು ಅಥವಾ ಸಮುದಾಯ ಪ್ರಮಾಣಕಗಳನ್ನು ಸಾಮಾನ್ಯವಾಗಿ ಉಲ್ಲಂಘಿಸುವ ಇತರ ಹಾನಿಕಾರಕ ಕಂಟೆಂಟ್‌ನ ಕುರಿತು ವರದಿ ಮಾಡಲು, ಒಂದು ಸಾಮಾಜಿಕ ಮಾಧ್ಯಮ ಸೇವೆಯ ಆನ್‌ಲೈನ್ ಪರಿಕರಗಳನ್ನು ಅಥವಾ ಸಿಸ್ಟಂ ಅನ್ನು ಬಳಸುವುದು.

## ಕುಟುಂಬ ಚಟುವಟಿಕೆ

**ನಂ. 1: ನಿಮ್ಮ ಭಾವದ ಕುರಿತು ಎಚ್ಚರಿಕೆ ವಹಿಸುವುದು**

ಒಂದು ಪಠ್ಯ ಸಂದೇಶ ಅಥವಾ ಪೋಸ್ಟ್‌ನ ಭಾವವೇ ಅದರ ಆತ್ಮವಾಗಿದೆ - ಅದನ್ನು ಸ್ವೀಕರಿಸುವಾಗ ವ್ಯಕ್ತಿಗೆ ಒಳ್ಳೆಯ ಅಥವಾ ಕೆಟ್ಟ ಭಾವನೆ ಮೂಡುತ್ತದೆಯೇ ಎಂಬುದನ್ನು ಇದು ನಿರ್ಧರಿಸುತ್ತದೆ. ಪೋಷಕರು ಮತ್ತು ಮಕ್ಕಳು ಸದಾಕಾಲ ಪಠ್ಯ ಸಂದೇಶ, ಮೆಸೆಂಜರ್ ಆ್ಯಪ್‌ಗಳು ಮತ್ತು DM (ನೇರ ಸಂದೇಶ) ಕಳುಹಿಸುತ್ತಾ ಇರುವುದರಿಂದಾಗಿ ಮತ್ತು ಪರಸ್ಪರರ ಕುರಿತು ಚೆನ್ನಾಗಿ ತಿಳಿದುಕೊಂಡಿರುವುದರಿಂದಾಗಿ, ಒಂದು ಪಠ್ಯ ಸಂದೇಶ ಯಾವ ರೀತಿಯ ಅರ್ಥ ನೀಡಬಹುದು ಎಂಬ ಬಗ್ಗೆ ಅವರು ಯಾವಾಗಲೂ ಯೋಚಿಸುವುದಿಲ್ಲ. ನಮಗೆ ಪರಿಚಯವಿರುವ ಜನರಿಗೆ ಪಠ್ಯ ಸಂದೇಶ ಕಳುಹಿಸುವುದು, ಮಾತುಕತೆ ಅಥವಾ ಸಂಪರ್ಕದ ಮತ್ತೊಂದು ವಿಧಾನವಾಗಿದೆ, ಅಷ್ಟೇ. ಆದರೆ ಜನರಿಗೆ ಪರಸ್ಪರ ಹೆಚ್ಚು ಪರಿಚಯವಿಲ್ಲದಿದ್ದಾಗ, ಪಠ್ಯ ಸಂದೇಶ ಅಥವಾ ಎಮೋಜಿಯನ್ನು ಕೆಲವೊಮ್ಮೆ ಅದರ ಉದ್ದೇಶಿತ ಅರ್ಥಕ್ಕಿಂತ ಬಹಳ ಭಿನ್ನವಾಗಿ ಅರ್ಥಮಾಡಿಕೊಳ್ಳುವ ಸಾಧ್ಯತೆಯಿರುತ್ತದೆ. ಆದ್ದರಿಂದ, ಆ ಕುರಿತು ಎಲ್ಲರನ್ನೂ ಯೋಚನೆಗೆ ಹಚ್ಚುವುದಕ್ಕಾಗಿ ಇಲ್ಲೊಂದು ಸರಳ ಚಟುವಟಿಕೆಯಿದೆ:

**1.** ನಿಮ್ಮ ಕುಟುಂಬದ ಎರಡು ಅಥವಾ ಹೆಚ್ಚು ಫೋನ್‌ಗಳನ್ನು ತೆಗೆದುಕೊಂಡು ಬನ್ನಿ ಮತ್ತು ಪಠ್ಯ ಸಂದೇಶಗಳು (ಅಥವಾ ಎಲ್ಲರೂ ಬಳಸುವ ಒಂದು ಸಂದೇಶ ಆ್ಯಪ್) ಅನ್ನು ತೆರೆಯಿರಿ ಮತ್ತು ಕುಟುಂಬದ ಇಬ್ಬರು ಸದಸ್ಯರ ನಡುವೆ ಒಂದು ಸಂಭಾಷಣೆಯನ್ನು ಪ್ರಾರಂಭಿಸಿ. ಅದು ನಿಜವಾದ ಅಥವಾ ಒಂದು ಕಾಲ್ಪನಿಕ ಸನ್ನಿವೇಶದ ಕುರಿತಾಗಿರಬಹುದು - ನೀವು ಈ ವಾರಾಂತ್ಯದಲ್ಲಿ ಮಾಡಲಿರುವ ಯಾವುದೋ ಸಂಗತಿ, ಶಾಲೆಯಲ್ಲಿ ನಡೆದ ಯಾವುದೋ ವಿಚಾರ, ಕುಟುಂಬದ ಸದಸ್ಯರಿಂದ ಯಾರೋ ಸಹಾಯ ಕೇಳಿರುವುದು ಇತ್ಯಾದಿ ಆಗಿರಬಹುದು.

**2.** ಆ ಮಾತುಕತೆಯನ್ನು ನಿರ್ದಿಷ್ಟ ಭಾವದಲ್ಲಿ ಗಟ್ಟಿಯಾಗಿ ಓದಿರಿ - ಖುಷಿ, ಬೇಸರ, ಸಿಟ್ಟು ಇತ್ಯಾದಿ.

**3.** ಅವರು ಅದನ್ನು ಓದುವುದನ್ನು ಆಲಿಸಿದಾಗ ನೀವು ಏನನ್ನು ಗಮನಿಸಿದಿರಿ ಎಂಬ ಕುರಿತು ಮಾತನಾಡಿ. ಅದನ್ನು ಆಲಿಸಿದಾಗ ನಿಮಗೆ ಹೇಗೆ ಅನಿಸಿತು? ನಿಮ್ಮ ಕುಟುಂಬದ ಹೊರಗಿನವರು ಯಾವ ರೀತಿ ಯೋಚಿಸಬಹುದು ಅಥವಾ ಏನು ಭಾವಿಸಬಹುದು ಎಂಬ ಬಗ್ಗೆ ನಿಮಗೇನು ಅನಿಸುತ್ತದೆ? ಆ ಪಠ್ಯ ಸಂದೇಶಗಳನ್ನು ಹೇಗೆ ವಿಭಿನ್ನವಾಗಿ ಹೇಳಬಹುದಾಗಿತ್ತು? ನೀವು ಬಹುಶಃ ಬೇರೆ ಪ್ರಶ್ನೆಗಳನ್ನು ಸಹ ಕೇಳುವಿರಿ, ಆದ್ದರಿಂದ ಮುಂದುವರಿಸಿ. :)

**4.** ಮುಂದೆ, ಕುಟುಂಬದ ಬೇರೆ ಇಬ್ಬರು ಸದಸ್ಯರು, ಮೊದಲನೆಯದಕ್ಕಿಂತ ಬೇರೆಯದೇ ಆದ ಭಾವದಲ್ಲಿ ಒಂದು ಪಠ್ಯ ಸಂಭಾಷಣೆಯನ್ನು ಮಾಡಲು ಪ್ರಯತ್ನಿಸಲಿ: ಬಹುಶಃ ಸಿಟ್ಟು ಅಥವಾ ಬೇಸರದ ಭಾವದಲ್ಲಿ. ಅದನ್ನು ಗಟ್ಟಿಯಾಗಿ ಓದಿರಿ ಮತ್ತು ಅದನ್ನು ಆಲಿಸುವಾಗ ಎಲ್ಲರಿಗೂ ಏನನಿಸಿತು ಎಂಬ ಬಗ್ಗೆ ಮಾತನಾಡಿ.

**ಸಂ. 2: ಸಾಮಾಜಿಕ ನಕಾರಾತ್ಮಕತೆಯ ಕುರಿತು ಮಕ್ಕಳು ಏನು ಮಾಡಬಹುದು**

ಇಲ್ಲಿ, ಶಾಲೆಯ ಸಾಮಾಜಿಕ ಸನ್ನಿವೇಶದ ಕುರಿತಾಗಿ ತಂದೆ-ತಾಯಿ ಮತ್ತು ಮಕ್ಕಳ ಕೆಲವು ಮಾತುಕತೆಯ ವಿಷಯಗಳನ್ನು (ಮತ್ತು ಪ್ರಶ್ನೆಗಳನ್ನು) ಕೊಡಲಾಗಿದೆ. ನಿಮ್ಮ ಕುಟುಂಬಕ್ಕೆ ಯಾವುದು ಸೂಕ್ತವಾಗಿರುತ್ತದೆ ಎಂದು ನೋಡಿ.

ಮಕ್ಕಳು ಶಾಲೆಯಲ್ಲಿ ಪರಸ್ಪರ ಬಹಳ ಸ್ನೇಹದಿಂದ ಇರುತ್ತಾರೆಯೇ?
ನೀವು ಯಾವತ್ತಾದರೂ, ಯಾರಾದರೂ ಬೇರೆಯವರ ಜೊತೆ ಒಂದಿಷ್ಟು ಬಾರಿ ಅಥವಾ ದೀರ್ಘ ಸಮಯದವರೆಗೆ ಕೆಟ್ಟದಾಗಿ ನಡೆದುಕೊಳ್ಳುವುದನ್ನು ನೋಡಿದ್ದೀರಾ?

ಅದರಲ್ಲಿ ಒಳಗೊಂಡಿರುವ ಮಕ್ಕಳ ಪರಿಚಯ ನಿಮಗಿದೆಯೇ?

ಅವರು ನಿಮ್ಮ ಜೊತೆ ಕೆಟ್ಟದಾಗಿ ನಡೆದುಕೊಂಡರೆ ನೀವು ನನ್ನ ಬಳಿ ಹೇಳುತ್ತೀರಾ? (ಇಲ್ಲ ಎಂದಾದರೆ, ಏಕೆ?)ಆ ಕೆಟ್ಟ ನಡತೆಗೆ ಬೇರೆಯವರು ಗುರಿಯಾಗುತ್ತಿದ್ದರೆ, ಆ ಸನ್ನಿವೇಶದಿಂದಾಗಿ ನಿಮಗೆ ಹೇಗನಿಸಿತು?

- ನೀವು ಅದರ ಬಗ್ಗೆ ಏನು ಮಾಡಿದ್ದೀರಿ?
- ಅದು ಆನ್‌ಲೈನ್‌ನಲ್ಲಿ ನಡೆಯುತ್ತಿದೆಯೇ? ನೀವು ಅವರನ್ನು ಮ್ಯೂಟ್ ಮಾಡಬಹುದು ಅಥವಾ ನಿರ್ಬಂಧಿಸಬಹುದು ಎಂದು ಕೇಳಿದ್ದೇನೆ - ಅದರಿಂದ ಪ್ರಯೋಜನವಾಗಬಹುದೇ? ಇಲ್ಲ ಎಂದಾದರೆ, ಏಕೆ ಎಂದು ಹೇಳುತ್ತೀರಾ? ಹೌದು ಎಂದಾದರೆ, ಅದನ್ನು ಹೇಗೆ ಮಾಡಬಹುದು ಎಂದು ತೋರಿಸುತ್ತೀರಾ?
- (ನೀವು ಏನೂ ಮಾಡಲಿಲ್ಲ ಎಂದಾದರೆ), ನೀವು ಏನಾದರೂ ಮಾಡಿದ್ದರೆ ಚೆನ್ನಾಗಿತ್ತು ಎಂದು ಭಾವಿಸುತ್ತಿದ್ದೀರಾ?
- ಮತ್ತೊಮ್ಮೆ ಹೀಗಾದರೆ ನೀವೇನು ಮಾಡುವಿರಿ ಎಂದು ನೀವು ಭಾವಿಸುತ್ತೀರಿ?
- ನಿಮ್ಮನ್ನು ಯಾರಾದರೂ ಬೆದರಿಸುತ್ತಿದ್ದರೆ, ಅದರಿಂದ ಸಹಾಯವಾಗಬಹುದು ಎಂದು ನಿಮಗೆ ಅನಿಸುತ್ತದೆಯೇ?
- ಕರುಣೆ ತೋರುವುದರ ಮೂಲಕ ಅಥವಾ ಕೇವಲ ಆಲಿಸುವುದರ ಮೂಲಕ ನೀವು ಯಾರಿಗಾದರೂ ಸಹಾಯ ಮಾಡಬಹುದು ಎಂದು ನಿಮಗೆ ಅನಿಸುತ್ತದೆಯೇ?
- ನಿಮಗೆ ಗೊತ್ತೇ, ಯಾರಾದರೂ ಆನ್‌ಲೈನ್‌ನಲ್ಲಿ ಕೆಟ್ಟ ವಿಷಯಗಳನ್ನು ನೋಡಿ ಅದನ್ನು ಇತರ ಜನರೊಂದಿಗೆ ಹಂಚಿಕೊಂಡರೆ, ಅದರಿಂದ ವಿಷಯವು ಇನ್ನಷ್ಟು ಹದಗೆಡಬಹುದು, ಅಲ್ಲವೇ?
- ಆನ್‌ಲೈನ್‌ನಲ್ಲಿ ನೋವು ಅನುಭವಿಸುತ್ತಿರುವ ಒಬ್ಬ ಸ್ನೇಹಿತರಿಗೆ ಸಹಾಯ ಮಾಡಲು ನೀವು ತಯಾರಾಗಿದ್ದೀರಾ?
- ಅದನ್ನು ನೀವು ಹೇಗೆ ಮಾಡುವಿರಿ? ಆ ವರ್ತನೆಯನ್ನು ಖಂಡಿಸುವುದು (ಆ ವ್ಯಕ್ತಿಯನ್ನಲ್ಲ, ಅಲ್ಲವೇ?)? ನೋವು ಅನುಭವಿಸಿರುವ ವ್ಯಕ್ತಿಯ ಕುರಿತು ಯಾವುದಾದರೂ ಒಳ್ಳೆಯ ವಿಷಯವನ್ನು ಪೋಸ್ಟ್ ಮಾಡುವುದು? ಅವರಿಗೆ ನಿಮ್ಮ ಬೆಂಬಲವಿದೆ ಎಂದು ತಿಳಿಸುತ್ತಾ ಅವರಿಗೆ ಪಠ್ಯ ಸಂದೇಶ ಕಳುಹಿಸುವುದು ಅಥವಾ DM ಕಳುಹಿಸುವುದು? ಇತರ ವಿದ್ಯಾರ್ಥಿಗಳಿಗೆ

  ಪಠ್ಯ ಸಂದೇಶ ಅಥವಾ DM ಕಳುಹಿಸಿ ಆ ವ್ಯಕ್ತಿಯನ್ನು ಆನ್‌ಲೈನ್‌ನಲ್ಲಿ ಅಥವಾ ಖಾಸಗಿಯಾಗಿ ಬೆಂಬಲಿಸಲು ಹೇಳುವುದು?

ಕೆಲವೊಮ್ಮೆ, ಸಮರ್ಥಕರಾಗಿರುವುದು ಎಂದರೆ ಬೆದರಿಕೆಯನ್ನು ಎದುರಿಸುತ್ತಿರುವವರಿಗೆ ಸ್ನೇಹಿತನಾಗಿರುವುದು - ಅವರ ಮಾತುಗಳನ್ನು ಆಲಿಸುವುದು, ಅವರಿಗೆ ಪ್ರೀತಿ ಮತ್ತು ಸಕಾರಾತ್ಮಕತೆಯನ್ನು ಕಳುಹಿಸುವುದು ಅಥವಾ ಅವರ ಬೆಂಬಲಕ್ಕಿರುವುದು, ಅಷ್ಟೇ.




### ಕೈಂಡ್ ಕಿಂಗ್‌ಡಮ್

ಒಳ್ಳೆಯದೇ ಆಗಲಿ ಅಥವಾ ಕೆಟ್ಟದೇ ಆಗಲಿ, ಎಲ್ಲಾ ರೀತಿಯ ವೈಬ್‌ಗಳು ಬೇಗ ಹರಡುತ್ತವೆ. ಪಟ್ಟಣದ ಅತ್ಯಂತ ಬೆಳಕಿನ ಜಾಗದಲ್ಲಿ, ದಾಳಿಕೋರರು ನಕಾರಾತ್ಮಕತೆಯನ್ನು ಎಲ್ಲೆಡೆ ಹರಡುತ್ತಾ, ಅತ್ತಿತ್ತ ಓಡಾಡುತ್ತಿದ್ದಾರೆ.

ದಾಳಿಕೋರರು ಸ್ವಾಧೀನಪಡಿಸಿಕೊಳ್ಳುವುದನ್ನು ತಡೆಯಲು ಅವರನ್ನು ನಿರ್ಬಂಧಿಸಿ ಮತ್ತು ಅವರ ಕುರಿತು ವರದಿ ಮಾಡಿ ಮತ್ತು ಈ ನೆಲದ ಶಾಂತಿಯನ್ನು ಮರುಸ್ಥಾಪಿಸಲು ಇತರ ಇಂಟರ್‌ನಾಟ್‌ಗಳ ಕುರಿತು ಕರುಣೆ ತೋರಿಸಿ!

ನಿಮ್ಮ ಡೆಸ್ಕ್‌ಟಾಪ್ ಅಥವಾ ಮೊಬೈಲ್ ಸಾಧನದಲ್ಲಿ ವೆಬ್ ಬ್ರೌಸರ್ ತೆರೆಯಿರಿ ಮತ್ತು **g.co/KindKingdom** ಗೆ ಭೇಟಿ ನೀಡಿ

# ಸಂದೇಹ ಬಂದಾಗ, ಮಾತನಾಡಿ ಬಗೆಹರಿಸಿಕೊಳ್ಳಿ

ಮಕ್ಕಳು ಅನುಚಿತ ಕಂಟೆಂಟ್ ಅನ್ನು ಅಥವಾ ತಮಗೆ ಅಹಿತ ನೀಡುವಂತಹ ವರ್ತನೆಯನ್ನು ಆನ್‌ಲೈನ್‌ನಲ್ಲಿ ನೋಡಿದಾಗ ತಾವು ಏಕಾಂಗಿಯಲ್ಲ ಎಂಬುದನ್ನು ಅವರು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ - ವಿಶೇಷವಾಗಿ ಅದು ಅವರಿಗೆ ಅಥವಾ ಅವರು ಕಾಳಜಿವಹಿಸುವಂಥವರಿಗೆ ನೋವುಂಟು ಮಾಡುವಂತಹ ವಿಷಯವಾಗಿದ್ದರೆ.

ಅವರು ನಿಮ್ಮಿಂದ ಅಥವಾ ಅವರಿಗೆ ನಂಬಿಕೆಯಿರುವ ಕುಟುಂಬದ ಮತ್ತೊಬ್ಬ ಸದಸ್ಯರಿಂದ ಸಹಾಯ ಪಡೆಯಲು ಎಂದೂ ಹಿಂಜರಿಯಬಾರದು. ಆನ್‌ಲೈನ್‌ನಲ್ಲಿ ವಿಚಾರಗಳ ಕುರಿತು ಮಾತನಾಡುವುದು ಮತ್ತು ಆನ್‌ಲೈನ್ ವರದಿಗಾರಿಕೆ ಪರಿಕರಗಳನ್ನು ಬಳಸುವುದು ಸೇರಿದ ಹಾಗೆ, ಧೈರ್ಯಶಾಲಿಗಳಾಗಿರಲು ಮತ್ತು ಕ್ರಮ ಕೈಗೊಳ್ಳಲು ಬೇರೆ ಬೇರೆ ವಿಧಾನಗಳಿವೆ ಎಂದೂ ಸಹ ಅವರು ತಿಳಿದಿರುವುದು ಒಳ್ಳೆಯದು.



## ಗುರಿಗಳು

- ವಿಷಯಗಳು ನಕಾರಾತ್ಮಕವಾಗಿದ್ದಾಗ ಅಥವಾ ಅವರಿಗೆ ಅಹಿತವೆನಿಸಿದಾಗ ಸಹಾಯ ಕೇಳಲು ಮಕ್ಕಳನ್ನು **ಪ್ರೋತ್ಸಾಹಿಸುವುದು** ಮತ್ತು ಇತರರನ್ನು ಬೆಂಬಲಿಸುವುದು ಮತ್ತು ವಿಷಯಗಳನ್ನು ಉತ್ತಮಗೊಳಿಸಲು ಸಹಾಯ ಕೇಳುವುದು ನಿಜವಾಗಿಯೂ ಧೈರ್ಯದ ಕೆಲಸ ಎಂಬುದನ್ನು ಅವರು ಗ್ರಹಿಸುವಂತೆ ಮಾಡುವುದು
- ಒಂದು ಸನ್ನಿವೇಶದಲ್ಲಿ ಆಫ್‌ಲೈನ್‌ನಲ್ಲಿ ಮತ್ತು ಮುಖತಃ ಚರ್ಚಿಸುವುದು ಒಳ್ಳೆಯದೇ ಅಥವಾ, ಶೋಷಣೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡುವುದು ಒಳ್ಳೆಯದೇ ಅಥವಾ ಎರಡನ್ನೂ ಮಾಡಬೇಕೇ ಎಂಬುದನ್ನು **ಪರಿಗಣಿಸುವುದು**.
- ಆನ್‌ಲೈನ್‌ನಲ್ಲಿ ಮತ್ತು ಆಫ್‌ಲೈನ್‌ನಲ್ಲಿ ಸಹಾಯ ಮಾಡುವುದಕ್ಕಾಗಿ ಲಭ್ಯವಿರುವ ಆಯ್ಕೆಗಳ ಕುರಿತು **ಅರ್ಥಮಾಡಿಕೊಳ್ಳುವುದು**.

## ನೀವು ಪ್ರಾರಂಭಿಸುವ ಮೊದಲು

ಒಂದು ಕುಟುಂಬವಾಗಿ, ಇಂಟರ್ನೆಟ್ ಸಹಾಯ ಪ್ರೊಟೋಕಾಲ್ ಅಥವಾ ಪ್ಲ್ಯಾನ್ ಅನ್ನು ಸೆಟಪ್ ಮಾಡುವುದು ಪ್ರಯೋಜನಕಾರಿಯಾಗಿರಬಹುದು. ಇದು ಜಟಿಲವಾಗಿರಬೇಕೆಂದೆನಿಲ್ಲ – ಏಕೆ ಎಂಬ ಕುರಿತು ಎಲ್ಲರೂ ಯೋಚಿಸುವಂತಾಗಲು ಮತ್ತು ಆನ್‌ಲೈನ್‌ನಲ್ಲಿ ವಿಷಯಗಳು ಕೆಟ್ಟದಾಗಿದ್ದಾಗ ಸಹಾಯ ಕೇಳುವುದು ಹೇಗೆ ಎಂಬುದನ್ನು ತಿಳಿಸುವ ಒಂದು ಸರಳ ಚಟುವಟಿಕೆಯಾಗಿರಬೇಕುಬಂದಿಷ್ಟು ಸಹಾಯಕ ಸಲಹೆಗಳು:

- ನಿಮ್ಮ ಕುಟುಂಬದೊಂದಿಗೆ ನಿಮ್ಮ ಮೌಲ್ಯಗಳನ್ನು ವ್ಯಾಖ್ಯಾನಿಸಿ. ಇದನ್ನು ಮಾಡಬಹುದಾದ ಒಂದು ವಿಧಾನ ಹೀಗಿರಬಹುದು: "ನಮ್ಮ ಕುಟುಂಬದಲ್ಲಿ ನಾವು ಜನರನ್ನು, ಆನ್‌ಲೈನ್‌ನಲ್ಲಿ ಮತ್ತು ಆಫ್‌ಲೈನ್‌ನಲ್ಲಿ ______________ ನಿಂದ ನಡೆಸಿಕೊಳ್ಳುತ್ತೇವೆ" (ನಿಮ್ಮ ಕುಟುಂಬದ ಮೌಲ್ಯಗಳು ಹಾಗೂ ವರ್ತನೆಯ ನಿಯಮಗಳಿಗೆ ಸರಿಹೊಂದುವ ಪದಗಳನ್ನು ಬಳಸಿ ಬಿಟ್ಟ ಪದಗಳನ್ನು ತುಂಬಿರಿ – "ಗೌರವ", "ಕರುಣೆ" ಅಥವಾ "ಘನತೆ")
- ಮಾತುಕತೆಯ ಮಾರ್ಗಗಳನ್ನು ಮುಕ್ತವಾಗಿರಿಸಿ ಮತ್ತು ಶಾಲೆಯಲ್ಲಿ ಹಾಗೂ ಆನ್‌ಲೈನ್‌ನಲ್ಲಿ ನಡೆಯುವ ವಿಚಾರಗಳ ಕುರಿತು ಮಾತನಾಡಲು ಮನೆಯನ್ನು ಒಂದು ಸುರಕ್ಷಿತ ಸ್ಥಳವನ್ನಾಗಿ ಸ್ಥಾಪಿಸಿ.
- ಕುಟುಂಬದ ನೀತಿಗಳು ಅಥವಾ ವಿವಿಧ ರೀತಿಯ ತಂತ್ರಜ್ಞಾನ ಬಳಕೆಯ ಮೌಲ್ಯ ಮತ್ತು ಆದ್ಯತೆಯ ನಿಯಮಗಳ ಕುರಿತು ಆಗಾಗ ಮಾತನಾಡಿ – ಸಂವಹನಕ್ಕಾಗಿ, ಮನರಂಜನೆಗಾಗಿ, ಕೆಲಸಕ್ಕಾಗಿ, ಆಟಕ್ಕಾಗಿ, ಜನರೊಂದಿಗೆ ಬೆರೆಯುವುದಕ್ಕಾಗಿ ಇತ್ಯಾದಿ.
- ಸಾಧನಗಳು ಮತ್ತು ಮಾಧ್ಯಮದ ಬಳಕೆಯಲ್ಲಿ ಯಾವ ವಿಚಾರ, ಯಾವಾಗ ಸ್ವೀಕಾರಾರ್ಹ ಮತ್ತು ಸ್ವೀಕಾರಾರ್ಹವಲ್ಲ ಎಂಬ ಕುರಿತು ಕೌಟುಂಬಿಕ ವರ್ತನೆಗಳು ಮತ್ತು ನೀತಿಗಳ ಕುರಿತು ಚರ್ಚಿಸಿ.

## ಪದಪಟ್ಟಿ

### ಪ್ರೊಟೊಕಾಲ್

ಅನುಸರಿಸುವುದಕ್ಕಾಗಿ ಒಂದು “ಅಧಿಕೃತ” ಯೋಜನೆ - ಈ ಮಾರ್ಗಸೂಚಿಯ ಉದ್ದೇಶಕ್ಕಾಗಿ, ನಿಮ್ಮ ಮಕ್ಕಳಿಗೆ ಅಹಿತ ಉಂಟುಮಾಡುವಂಥದ್ದು ಏನಾದರೂ ಆನ್ ಲೈನ್‌ನಲ್ಲಿ ಕಂಡುಬಂದಾಗ ಅವರೇನು ಮಾಡಬಹುದು ಎಂಬ ಕುರಿತು ನಿಮ್ಮ ಕುಟುಂಬದ ಕ್ರಮಗಳಾಗಿರುತ್ತವೆ.

### ವಿಶ್ವಾಸ

ಯಾವುದಾದರೂ ಅಥವಾ ಯಾರಾದರೂ ವಿಶ್ವಾಸಾರ್ಹರು ಅಥವಾ ಪ್ರಾಮಾಣಿಕರು ಎಂಬ ಬಗ್ಗೆ ಬಲವಾದ ನಂಬಿಕೆ.

### ಧೈರ್ಯಶಾಲಿ

ಎದೆಗುಂದದಿರುವುದು - ಇದರ ಅರ್ಥ ಹೆದರಿಕೆ ಇಲ್ಲ ಎಂದಲ್ಲ, ಏಕೆಂದರೆ ಜನರಿಗೆ ಭಯವಾದಾಗ ಅಥವಾ ನರ್ವಸ್ ಆದಾಗ ಅವರು ವಿಶೇಷವಾಗಿ ಧೈರ್ಯಶಾಲಿಗಳಾಗಿರುತ್ತಾರೆ ಆದರೂ ಸಹಾಯ ಕೇಳುತ್ತಾರೆ ಮತ್ತು ಸಕಾರಾತ್ಮಕ ಕ್ರಮವನ್ನು ಕೈಗೊಳ್ಳುತ್ತಾರೆ.

### ಶೋಷಣೆಯ ಕುರಿತು ವರದಿ ಮಾಡುವುದು

ಈ ಮಾರ್ಗಸೂಚಿಯಲ್ಲಿ, ಸಾಮಾಜಿಕ ಮಾಧ್ಯಮ ಆ್ಯಪ್‌ಗಳು ಹಾಗೂ ಸೇವೆಗಳಲ್ಲಿ ಸಮಸ್ಯೆಗಳನ್ನು ವರದಿ ಮಾಡುವುದಕ್ಕಾಗಿ ನಾವು ಈ ಪದವನ್ನು ಉಲ್ಲೇಖಿಸುತ್ತೇವೆ, ಹೆಚ್ಚಿನವುಗಳಲ್ಲಿ ಇದನ್ನು ಮಾಡುವುದಕ್ಕಾಗಿ ಪರಿಕರಗಳು ಅಥವಾ ಸಿಸ್ಟಂಗಳಿರುತ್ತವೆ.

## ಕುಟುಂಬ ಚಟುವಟಿಕೆ

### ಸಂ. 1: ನಿಮ್ಮ ಕುಟುಂಬದ ಇಂಟರ್ನೆಟ್ ಸಹಾಯ ಪ್ರೊಟೊಕಾಲ್ ಅನ್ನು ಸ್ಥಾಪಿಸುವುದು

ಒಟ್ಟಿಗೆ ಕುಳಿತುಕೊಳ್ಳಿ ಮತ್ತು ಕೆಳಗಿನ ಸನ್ನಿವೇಶಗಳನ್ನು ಗಟ್ಟಿಯಾಗಿ ಓದಿ (ಯಾರಾದರೂ ಬೇರೆ ಸನ್ನಿವೇಶಗಳ ಕುರಿತು ಆಲೋಚಿಸಿದರೆ, ಅವುಗಳನ್ನು ಸಹ ಸೇರಿಸಿಕೊಳ್ಳಲು ಹಿಂಜರಿಯಬೇಡಿ). ಪ್ರತಿಯೊಂದರ ನಂತರ, ನೀವು ಚೆಕ್ ಮಾಡುವುದಕ್ಕಾಗಿ 3 ಬಿಟ್ಟ ಸ್ಥಳಗಳು ಮತ್ತು 3 ಬಾಕ್ಸ್‌ಗಳಿರುತ್ತವೆ. ಒಂದು ಕುಟುಂಬವಾಗಿ, ಒಂದು ಸಮಸ್ಯೆಯನ್ನು ಆನ್‌ಲೈನ್‌ನಲ್ಲಿ ವರದಿ ಮಾಡಬೇಕೇ, ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಬೇಕೇ ಅಥವಾ ಎರಡನ್ನೂ ಮಾಡಬೇಕೇ ಎಂಬುದನ್ನು ಆಯ್ಕೆ ಮಾಡಿ. ನಿಮಗೆ ಖಚಿತವಾಗಿ ಗೊತ್ತಿಲ್ಲ ಎಂದಾದರೆ, ಜೊತೆಯಾಗಿ ಚರ್ಚೆ ಮಾಡಿ - ನಿಮ್ಮ ಕುಟುಂಬದವರು ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿರಬಹುದು, ಮತ್ತು ಕಷ್ಟ ಕೋಟಲೆಗಳನ್ನು ಒಂದು ಕುಟುಂಬವಾಗಿ ಹೇಗೆ ಎದುರಿಸಬೇಕು ಎಂಬುದನ್ನು ಅಭ್ಯಾಸ ಮಾಡಲು ಇದೊಂದು ಉತ್ತಮ ವಿಧಾನವಾಗಿದೆ. ನೀವು ಕುಟುಂಬದ ಸದಸ್ಯರಿಗೆ ವರದಿ ಮಾಡುವುದರ ಬಾಕ್ಸ್ ಅನ್ನು ಚೆಕ್ ಮಾಡಿದ್ದರೆ - ಆದ್ಯತೆಯ ಕ್ರಮದಲ್ಲಿ ಜನರ ಹೆಸರುಗಳನ್ನು ಬಿಟ್ಟ ಸ್ಥಳದಲ್ಲಿ ತುಂಬಿರಿ. ಉದಾಹರಣೆಗೆ, ತಂದೆ-ತಾಯಿ ಅಥವಾ ಪೋಷಕರು ಮೊದಲ ಸ್ಥಾನದಲ್ಲಿದ್ದರೆ, ಅವರ ಹೆಸರು ಅಥವಾ ಅಡ್ಡಹೆಸರನ್ನು ಬರೆಯಿರಿ. ಅವರು ಲಭ್ಯವಿಲ್ಲದಿದ್ದರೆ, ಎರಡನೆಯ ಸ್ಥಾನದಲ್ಲಿ ಅವರ ಜಾಗವನ್ನು ಯಾರು ತೆಗೆದುಕೊಳ್ಳುತ್ತಾರೆ ಎಂಬುದನ್ನು ಬರೆಯಿರಿ. ಮೂರನೆಯ ಬಿಟ್ಟ ಸ್ಥಳಕ್ಕೂ ಇದೇ ಅನ್ವಯಿಸುತ್ತದೆ.

ಇವುಗಳಲ್ಲಿ ಯಾವುದಕ್ಕೂ “ಸರಿಯಾದ” ಪ್ರತಿಕ್ರಿಯೆ ಅಥವಾ ಪ್ರತಿಕ್ರಿಯೆಗಳ ಗುಂಪು ಇರುವುದಿಲ್ಲ - ನಿಮ್ಮ ಕುಟುಂಬಕ್ಕೆ ಸೂಕ್ತವಾದ ಒಂದು ಯೋಜನೆಯನ್ನು ಗಟ್ಟಿಗೊಳಿಸುವುದು ಮತ್ತು ಅದಕ್ಕೆ ಬದ್ಧರಾಗಿಸುವುದು ಈ ಚಟುವಟಿಕೆಯ ಉದ್ದೇಶವಾಗಿದೆ. ಔಪಚಾರಿಕವಾಗಿಯಾದರೂ, ಒಂದು ಸ್ಪಷ್ಟವಾದ ಕ್ರಿಯಾಯೋಜನೆಯನ್ನು ಬರೆದಿಡುವುದು, ಅನುಮಾನವನ್ನು ಕೊನೆಗೊಳಿಸಲು ಮತ್ತು ಮೊದಲಿನಿಂದಲೇ ಸಕಾರಾತ್ಮಕ ಸಂವಹನವನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ.

**ಸನ್ನಿವೇಶ 1:** ನಿಮ್ಮ ಮಗಳ ಶಾಲೆಯಲ್ಲಿ ಯಾರೋ ಒಬ್ಬರು, ತಮ್ಮ ಒಬ್ಬ ಸ್ನೇಹಿತರ ಕುರಿತು ತುಂಬಾ ಕೆಟ್ಟ ಕಾಮೆಂಟ್‌ಗಳನ್ನು ಪೋಸ್ಟ್ ಮಾಡುತ್ತಾರೆ. ಅದು ಯಾರೆಂದು ತನಗೆ ಗೊತ್ತಿದೆ ಎಂದು ಆಕೆ ಭಾವಿಸುತ್ತಾಳೆ, ಆದರೆ ಅವಳಿಗೆ ಖಚಿತವಾಗಿ ತಿಳಿದಿಲ್ಲ. ನೀವೆಲ್ಲರೂ ಯಾವ ಬಾಕ್ಸ್ ಅನ್ನು ಚೆಕ್ ಮಾಡುತ್ತೀರಿ, ಬಿಟ್ಟ ಸ್ಥಳಗಳಲ್ಲಿ ಯಾರ ಹೆಸರು ಬರೆಯಬೇಕು - ನಿಮಗೆ ಸಹಮತವಿಲ್ಲದಿದ್ದರೆ ಈ ಸಮಸ್ಯೆಯ ಕುರಿತು ಚರ್ಚಿಸಿ ಮತ್ತು ಏನು ಮಾಡಬೇಕೆಂದು ನಿರ್ಧರಿಸಿ.

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________
ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________
ಎರಡನ್ನೂ ಮಾಡಿ ____________________

**ಸನ್ನಿವೇಶ 2:** ಮಕ್ಕಳು: ನಿಮ್ಮಲ್ಲಿ ಯಾರೋ ಒಬ್ಬರು ಆನ್‌ಲೈನ್‌ನಲ್ಲಿ ತುಂಬಾ ಅನುಚಿತವಾದ ಕೆಲವು ಫೋಟೋಗಳನ್ನು ಆಕಸ್ಮಿಕವಾಗಿ ನೋಡುತ್ತೀರಿ. ನೀವೇನು ಮಾಡುವಿರಿ? ತಂದೆ-ತಾಯಿ: ಅವರೇನು ಮಾಡಬೇಕೆಂದು ನೀವು ಬಯಸುವಿರಿ?

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________
ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________
ಎರಡನ್ನೂ ಮಾಡಿ ____________________

**ಸನ್ನಿವೇಶ 3:** ಕೌಟುಂಬಿಕ ಕೂಟವೊಂದರಲ್ಲಿ ಎಲ್ಲರೂ ಇರುವ ಒಂದು ಗ್ರೂಪ್ ಫೋಟೋವನ್ನು ಕಸಿನ್ ಒಬ್ಬರು ಪೋಸ್ಟ್ ಮಾಡುತ್ತಾರೆ ಮತ್ತು ನಿಮ್ಮ ಕುಟುಂಬದ ಸದಸ್ಯರು ಅದರಲ್ಲಿ ತಾವು ಚೆನ್ನಾಗಿ ಕಾಣಿಸುತ್ತಲೇ ಇಲ್ಲ ಎಂದು ಭಾವಿಸುತ್ತಾರೆ. ನೀವು ಸಹಾಯ ಕೇಳುತ್ತೀರಾ ಅಥವಾ ಅದರ ಕುರಿತು ವರದಿ ಮಾಡುತ್ತೀರಾ?

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________
ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________
ಎರಡನ್ನೂ ಮಾಡಿ ____________________

**ಸನ್ನಿವೇಶ 4:** ಮಕ್ಕಳಲ್ಲಿ ಒಬ್ಬರು ಕಾರ್ಟೂನ್ ವೀಡಿಯೊ ವೀಕ್ಷಿಸುತ್ತಿದ್ದಾರೆ ಮತ್ತು ಹಠಾತ್ತಾಗಿ ಒಂದು ವಿಚಿತ್ರ ಕಂಟೆಂಟ್ ಕಂಡುಬರುತ್ತದೆ. ಅದು ಖಂಡಿತವಾಗಿಯೂ ಮಕ್ಕಳಿಗೆ ಸೂಕ್ತವಲ್ಲ ಮತ್ತು ಅವರಿಗೆ ಅಹಿತವೆನಿಸುತ್ತದೆ. ಏನು ಮಾಡಿದರೆ ಉತ್ತಮ ಎಂದು ನಿರ್ಧರಿಸಿದ ಬಳಿಕ, ಇಂತಹ ಅಹಿತಕರ "ಅಚ್ಚರಿಗಳನ್ನು" ಕಡಿಮೆಗೊಳಿಸಲು ಅಥವಾ ತಡೆಗಟ್ಟಲು ಭವಿಷ್ಯದಲ್ಲಿ ಏನು ಮಾಡಬಹುದು ಎಂಬುದನ್ನು ಚರ್ಚಿಸಿ.

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________
ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________
ಎರಡನ್ನೂ ಮಾಡಿ ____________________

**ಸನ್ನಿವೇಶ 5:** ನಿಮ್ಮಲ್ಲಿ ಒಬ್ಬರು ಸ್ನೇಹಿತರೊಂದಿಗೆ ಆನ್‌ಲೈನ್ ಗೇಮ್ ಆಡುತ್ತಿದ್ದೀರಿ ಮತ್ತು ಯಾವ ಆಟಗಾರರಿಗೂ ಪರಿಚಯವಿರದವರೊಬ್ಬರು ಅವರೊಂದಿಗೆ ಚಾಟ್ ಮಾಡಲು ಪ್ರಾರಂಭಿಸುತ್ತಾರೆ. ಅವರು ಕೆಟ್ಟದಾಗಿ ನಡೆದುಕೊಳ್ಳುತ್ತಿಲ್ಲ, ಆದರೆ ಯಾರಿಗೂ ಅವರ ಪರಿಚಯವಿಲ್ಲ, ಅಷ್ಟೇ. ಏನು ಮಾಡಬೇಕೆಂದು ನಿರ್ಧರಿಸಿ. ಅವರ ಕುರಿತು ವರದಿ ಮಾಡಬೇಕೇ? ಕುಟುಂಬದ ಮತ್ತೊಂದು ಸದಸ್ಯರೊಂದಿಗೆ ಮಾತನಾಡಬೇಕೇ?

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________

ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________

ಎರಡನ್ನೂ ಮಾಡಿ ____________________

**ಅದನ್ನು ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಿ:** ನಿಮ್ಮ ಕುಟುಂಬದಲ್ಲಿರುವ ಆಟಗಾರ ಆ ವ್ಯಕ್ತಿಯನ್ನು ನಿರ್ಲಕ್ಷಿಸಬೇಕೇ? ಹೊಸಬರು ಯಾರು ಎಂಬ ಕುರಿತು ಒಂದಿಷ್ಟು ತಿಳಿದುಕೊಳ್ಳಲು ಅವರೊಂದಿಗೆ ಗುಂಪಾಗಿ ಚೆನ್ನಾಗಿ ಮಾತನಾಡಬೇಕೇ (ಏಕೆ/ಏಕೆ ಬೇಡ)?

**ಸನ್ನಿವೇಶ 6:** ಮಕ್ಕಳಲ್ಲಿ ಒಬ್ಬರು, ತಮ್ಮ ಶಾಲೆಯ ಒಬ್ಬ ವಿದ್ಯಾಥಿಯು ಆನ್‌ಲೈನ್‌ನಲ್ಲಿ ಕಾಮೆಂಟ್ ಮಾಡಿ, ತಾನು ಮರುದಿನ ಲಂಚ್‌ರೂಂನಲ್ಲಿ ಮತ್ತೊಬ್ಬ ವಿದ್ಯಾರ್ಥಿಯೊಂದಿಗೆ ಹೊಡೆದಾಡಲಿದ್ದೇನೆ ಎಂದು ಹೇಳಿರುವುದನ್ನು ಗಮನಿಸುತ್ತಾರೆ. ಅವರೇನು ಮಾಡಬೇಕು ಎಂಬುದನ್ನು ಒಂದು ಕುಟುಂಬವಾಗಿ ಚರ್ಚಿಸಿ.

ಸಮಸ್ಯೆಯ ಕುರಿತು ಆನ್‌ಲೈನ್‌ನಲ್ಲಿ ವರದಿ ಮಾಡಿ ____________________

ಕುಟುಂಬದ ಸದಸ್ಯರೊಂದಿಗೆ ನೇರವಾಗಿ ಮಾತನಾಡಿ ____________________

ಎರಡನ್ನೂ ಮಾಡಿ ____________________

## ಸಂ. 2: ಆನ್‌ಲೈನ್‌ನಲ್ಲಿ ಸಮಸ್ಯೆಗಳ ಕುರಿತು ವರದಿ ಮಾಡುವುದು

ಒಂದು ಫೋನ್, ಟ್ಯಾಬ್ಲೆಟ್, ಲ್ಯಾಪ್‌ಟಾಪ್ ಅಥವಾ ಡೆಸ್ಕ್‌ಟಾಪ್ ಅನ್ನು ತೆಗೆದುಕೊಂಡು, ಎಲ್ಲರಿಗೂ ಸ್ಕ್ರೀನ್ ಕಾಣಿಸುವ ಹಾಗೆ ಒಂದು ಕುಟುಂಬವಾಗಿ ಒಟ್ಟಿಗೆ ಕುಳಿತುಕೊಳ್ಳಿ.

ಕುಟುಂಬದ ಸದಸ್ಯರ ಎರಡು ಅಥವಾ ಹೆಚ್ಚಿನ ಖಾತೆಗಳನ್ನು ಬಳಸಿಕೊಂಡು ನಿಮ್ಮ ಮೆಚ್ಚಿನ ಸಾಮಾಜಿಕ ಮಾಧ್ಯಮ ಆ್ಯಪ್‌ಗಳು ಅಥವಾ ಸೈಟ್‌ಗಳನ್ನು ತೆರೆಯಿರಿ ಮತ್ತು ಆ ಆಪ್‌ಗಳಲ್ಲಿ ಸಮಸ್ಯೆಗಳ ಕುರಿತು ವರದಿ ಮಾಡುವುದು ಹೇಗೆ ಎಂಬುದನ್ನು ಜೊತೆಯಾಗಿ ಅನ್ವೇಷಿಸಿ.

ಕೆಲವೊಮ್ಮೆ ಒಂದು ಆ್ಯಪ್‌ನ ಬಳಕೆಯ ಕುರಿತು ಪೋಷಕರಿಗಿಂತ ಚೆನ್ನಾಗಿ ಮಕ್ಕಳು ತಿಳಿದುಕೊಂಡಿರುತ್ತಾರೆ, ಮತ್ತು ಅವರ ಸಾಮಾಜಿಕ ಮಾಧ್ಯಮ ಕೌಶಲ್ಯಗಳನ್ನು ಪ್ರದರ್ಶಿಸಲು ಅವಕಾಶ ಕೊಟ್ಟು, ನಿಮಗೂ ಅದನ್ನು ಕಲಿಸಲು ಹೇಳುವುದು ಆಸಕ್ತಿದಾಯಕವೂ, ತಮಾಷೆಯೂ ಆಗಿರಬಹುದು!ಯಾರಾದರೂ ಒಬ್ಬರು ಬೇರೆ ಏನನ್ನೋ ಕೂಡಾ ಕಲಿಯಲು ಬಯಸಿದರೆ, ತಾವು ಬಳಸುವ ತಂತ್ರಜ್ಞಾನದ ಕುರಿತು ಒಂದಿಷ್ಟು ವಿಷಯಗಳನ್ನು ಜೊತೆಯಾಗಿ ಕಲಿತುಕೊಳ್ಳಲು ಎಲ್ಲರಿಗೂ ಇದು ಒಂದು ಉತ್ತಮ ಅವಕಾಶವಾಗಬಹುದು.

# ಈಗ, ಮುಂದೇನು ಮಾಡಬೇಕು?

ವಾವ್. ಅದು ಜೊತೆಯಾಗಿ ರಚಿಸಲು, ಸಾಕಷ್ಟು Internet awesomeness ವಿಷಯವಾಯಿತು!

ಈ ಕೆಲವು ಐಡಿಯಾಗಳು ಹಾಗೂ ಚಟುವಟಿಕೆಗಳನ್ನು ಪ್ರಯತ್ನಿಸಲು ನಿಮಗೂ ಮೋಜೆನಿಸಿತು ಎಂದು ನಾವು ಭಾವಿಸುತ್ತೇವೆ. ನಿಮಗೆ ಇನ್ನಷ್ಟು ಬೇಕಿದ್ದರೆ ಅಥವಾ ಕೆಲವು ಬೇರೆ ಧ್ವನಿಗಳು ಮತ್ತು ದೃಷ್ಟಿಕೋನಗಳನ್ನು ಆಲಿಸಲು ಬಯಸುವಿರಾದರೆ, ನಮ್ಮ ಕೆಲವು ಹೆಚ್ಚುವರಿ ಸಂಪನ್ಮೂಲಗಳನ್ನು ನೋಡಿ.

ಎಲ್ಲಕ್ಕಿಂತಲೂ ಮುಖ್ಯವೆಂದರೆ, ನಿಮ್ಮ ಕುಟುಂಬಕ್ಕೆ ಯಾವುದು ಸೂಕ್ತ ಎನ್ನುವುದನ್ನು ಅನ್ವೇಷಿಸುವಲ್ಲಿ ಮಜಾ ಮಾಡಿ ಮತ್ತು ನೀವೆಲ್ಲರೂ ಸಹ **ಜಾಣತನ**, **ಎಚ್ಚರಿಕೆ**, **ಸದೃಢತೆ**, **ಕರುಣೆ**, ಮತ್ತು **ಧೈರ್ಯಶಾಲಿ** ಗುಣಗಳನ್ನು, ಇಂಟರ್ನೆಟ್‌ನಲ್ಲಿ ಮತ್ತು ಇಂಟರ್ನೆಟ್‌ನ ಹೊರಗಡೆಯೂ ಬೆಳೆಸಿಕೊಳ್ಳಿ.

---

## ಕುಟುಂಬಗಳಿಗಾಗಿ ಹೆಚ್ಚಿನ ಸಂಪನ್ಮೂಲಗಳು

**Google Family Link**
bit.ly/googlefamilylink

**Google ಡಿಜಿಟಲ್ ಯೋಗಕ್ಷೇಮ**
bit.ly/googledigitalwellbeing

**FOSI ನಲ್ಲಿ ಉತ್ತಮ ಡಿಜಿಟಲ್ ಪೋಷಕತ್ವ**
bit.ly/gooddigitalparenting

**Connect Safely**
connectsafely.org

**iKeepSafe**
ikeepsafe.org

**ರಾಷ್ಟ್ರೀಯ PTA ನಲ್ಲಿ ಕೌಟುಂಬಿಕ ಸಂಪನ್ಮೂಲಗಳು**
bit.ly/familyresourcesPTA

**“ಚತುರ ಹುಡುಕಾಟ” (Google for Education ನಿಂದ)**
bit.ly/savvysearchingYouTube

**ಸಂಪರ್ಕಿತ ಪೋಷಕತ್ವ**
bit.ly/ConnectedParentingArticle

# ಕುಟುಂಬಗಳಿಗಾಗಿ Family Link ಮಾರ್ಗಸೂಚಿ

## ನಿಮ್ಮ ಕುಟುಂಬಕ್ಕಾಗಿ ಡಿಜಿಟಲ್ ಮೂಲಭೂತ ನಿಯಮಗಳನ್ನು ಸೆಟ್ ಮಾಡುವುದಕ್ಕಾಗಿ ಮಾರ್ಗಸೂಚಿ.

ಇಂದಿನ ಪ್ರಪಂಚದಲ್ಲಿ, ಡಿಜಿಟಲ್ ಸಾಧನಗಳು ಎಲ್ಲೆಲ್ಲೂ ಇವೆ - ಮತ್ತು ನಾವು ಅವಕಾಶ ಕೊಟ್ಟರೆ, ಅವು ಯಾವಾಗಲೂ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಗಮನವನ್ನು ಅಪೇಕ್ಷಿಸುತ್ತವೆ. ಮನೆಯಲ್ಲಿ ಡಿಜಿಟಲ್ ಮೂಲಭೂತ ನಿಯಮಗಳನ್ನು ಅರ್ಥಮಾಡಿಕೊಳ್ಳುವುದು ಮತ್ತು ರಚಿಸುವುದು, ತಂತ್ರಜ್ಞಾನದೊಂದಿಗೆ ಮಕ್ಕಳ ಸಂಬಂಧದ ಕುರಿತು ಶಿಕ್ಷಣ ನೀಡುವಲ್ಲಿ ಕುಟುಂಬಗಳಿಗೆ ಮಹತ್ವದ ಹೆಜ್ಜೆಯಾಗಿದೆ. ಆದರೆ ಹಲವಾರು ಮಕ್ಕಳಿಗೆ ಅಥವಾ ಹದಿಹರೆಯದವರಿಗೆ ಇದು ತಮ್ಮ ಪೋಷಕರ "ಪವರ್ ಪ್ಲೇ" - ನಿಯಂತ್ರಣದಲ್ಲಿರುವ ಒಂದು ವ್ಯಾಯಾಮದಂತೆ ಕಾಣಬಹುದು. ಅದು ಹೀಗೆ ಇರಬೇಕೆಂದೇನಿಲ್ಲ.

ಇದನ್ನು ಒಂದು ಮಾತುಕತೆಯಾಗಿಸುವ ಮೂಲಕ, ಈ ನಿಯಮಗಳು ಏಕೆ ಮುಖ್ಯ ಎಂದು ನಿಮ್ಮ ಮಗು ಅರ್ಥಮಾಡಿಕೊಳ್ಳಲು ನೀವು ಸಹಾಯ ಮಾಡಬಲ್ಲಿರಿ. ಈ ಕೆಳಗಿನ ವಿಷಯಗಳು, Family Link ಮೂಲಕ ಲಭ್ಯವಿರುವ ಫೀಚರ್‌ಗಳ ಮೇಲೆ ಗಮನ ಕೇಂದ್ರೀಕರಿಸುತ್ತವೆ, ಆದರೆ ತಂತ್ರಜ್ಞಾನ ಬಳಕೆಯ ಕುರಿತಾದ ಚರ್ಚೆಗಳು ಎಲ್ಲಾ ಪೋಷಕರಿಗೂ ಉಪಯುಕ್ತವಾಗಿರಬಹುದು. Family Link ಎಂಬುದು, ಮಕ್ಕಳು Android ಸಾಧನವನ್ನು ಬಳಸಲು ಪ್ರಾರಂಭಿಸಿದಾಗ ತಂದೆ-ತಾಯಿಗೆ ಅದರ ಜಾಡು ಇರಿಸಿಕೊಳ್ಳಲು ಸಹಾಯ ಮಾಡುವ ಒಂದು ಆ್ಯಪ್ ಆಗಿದೆ. ತಂದೆ-ತಾಯಿ ತಮ್ಮ Android*, iPhone ಅಥವಾ Chromebook ಸಾಧನಗಳಲ್ಲಿ Family Link ಬಳಸಬಹುದು.

*ಮಗುವಿನ ಸಾಧನಕ್ಕಾಗಿ, ಆವೃತ್ತಿ 7.0 (Nougat) ಮತ್ತು ಅದಕ್ಕಿಂತ ನಂತರದ ಆವೃತ್ತಿಗಳನ್ನು ರನ್ ಮಾಡುತ್ತಿರುವ Android ಸಾಧನಗಳಲ್ಲಿ Family Link ರನ್ ಆಗುತ್ತದೆ. Android ಆವೃತ್ತಿಗಳು 5.0 ಮತ್ತು 6.0 (Lollipop ಮತ್ತು Marshmallow) ಅನ್ನು ರನ್ ಮಾಡುವ ಸಾಧನಗಳು ಸಹ Family Link ಅನ್ನು ರನ್ ಮಾಡಲು ಸಾಧ್ಯವಾಗಬಹುದು. ಆಯ್ದ Chromebook ಸಾಧನಗಳಲ್ಲಿ ಸಹ Family Link ಕೆಲಸ ಮಾಡುತ್ತದೆ.

ಹೆಚ್ಚಿನ ವಿವರಗಳಿಗಾಗಿ families.google.com/familylink/device-compatibility ಮತ್ತು ನಮ್ಮ ಸಹಾಯ ಕೇಂದ್ರಕ್ಕೆ ಭೇಟಿ ನೀಡಿ.

# ನಿಮ್ಮ ಮಗುವನ್ನು ಉತ್ತಮ ಕಂಟೆಂಟ್‌ಗೆ ನಿರ್ದೇಶಿಸಲು ಸಹಾಯ ಮಾಡಿ

ನಿಮ್ಮ ಮಗುವು ಡೌನ್‌ಲೋಡ್ ಮಾಡುವ ಆ್ಯಪ್‌ಗಳಿಗೆ ಹೋಲಿಸಿದರೆ ಆ ಶೈಕ್ಷಣಿಕ ಆ್ಯಪ್‌ನಲ್ಲಿ ಎಷ್ಟು ಸಮಯ ಕಳೆಯುತ್ತಾರೆ ಎಂದು ತಿಳಿದುಕೊಳ್ಳುವುದು ಒಳ್ಳೆಯದಲ್ಲವೇ? Family Link ಪೋಷಕರಿಗಾಗಿ ಪರಿಕರಗಳನ್ನು ಒದಗಿಸುತ್ತದೆ, ಉದಾಹರಣೆಗೆ ಪ್ರತಿದಿನ, ಸಾಪ್ತಾಹಿಕ ಮತ್ತು ಮಾಸಿಕ ಆ್ಯಪ್ ಬಳಕೆ ವರದಿಗಳು, ಆದ್ದರಿಂದ ನಿಮ್ಮ ಮಗು ತಮ್ಮ ಸಾಧನದಲ್ಲಿ ಹೇಗೆ ಸಮಯ ಕಳೆಯುತ್ತಾರೆ ಎಂಬ ಬಗ್ಗೆ ನಿಮಗೆ ಒಳ್ಳೆಯ ಕಲ್ಪನೆ ದೊರೆಯುತ್ತದೆ.

### ಕಂಟೆಂಟ್ ನಿರ್ಬಂಧಗಳು ಮತ್ತು ಆ್ಯಪ್ ಅನುಮೋದನೆಗಳು

ಒಂದು ಮಗುವು Google Play ಸ್ಟೋರ್ ಅನ್ನು ಪ್ರವೇಶಿಸಿದಾಗ ಗೇಮ್‌ಗಳು, ಚಲನಚಿತ್ರಗಳು, ಶೋಗಳು, ಪುಸ್ತಕಗಳು ಹಾಗೂ ಇನ್ನಷ್ಟನ್ನು ಬ್ರೌಸ್ ಮಾಡಲು ಅವರಿಗೆ ಸಾಧ್ಯವಾಗುತ್ತದೆ. ಹೆಚ್ಚುವರಿಯಾಗಿ, Family Link ಮೂಲಕ ತಂದೆ-ತಾಯಿ:

- ರೇಟಿಂಗ್‌ಗಳನ್ನು ಆಧರಿಸಿ, ಯಾವ ರೀತಿಯ ಕಂಟೆಂಟ್ ಗೋಚರಿಸಬೇಕು ಎಂಬುದನ್ನು ನಿರ್ಬಂಧಿಸಬಹುದು
- ಕಂಟೆಂಟ್ ಡೌನ್‌ಲೋಡ್ (ಉಚಿತ ಅಥವಾ ಪಾವತಿ) ಮಾಡಲು ಅನುಮೋದನೆ ಪಡೆಯುವುದನ್ನು ಅಗತ್ಯಗೊಳಿಸಬಹುದು
- ಡೌನ್‌ಲೋಡ್ ಅನ್ನು ವಿನಂತಿಸಿದಾಗ, ಆ್ಯಪ್‌ನ ಮಾಹಿತಿಯನ್ನು ಪರಿಶೀಲಿಸಬಹುದು ಮತ್ತು ಅದು ಜಾಹೀರಾತುಗಳನ್ನು ಹೊಂದಿದೆಯೇ, ಆ್ಯಪ್‌ನಲ್ಲಿ ಖರೀದಿಗಳನ್ನು ಹೊಂದಿದೆಯೇ ಅಥವಾ ನೀವು ವಿಚಾರ ಮಾಡಬೇಕಾದಂತಹ ಅನುಮತಿಗಳನ್ನು ಹೊಂದಿದೆಯೇ ಎಂಬುದನ್ನು ಕಂಡುಹಿಡಿಯಬಹುದು

ಅಸ್ತಿತ್ವದಲ್ಲಿರುವ ವಿವಿಧ ಕಂಟೆಂಟ್ ರೇಟಿಂಗ್‌ಗಳ ಕುರಿತು (ಉದಾ., "E ಅಂದರೆ ಎಲ್ಲರೂ" ವರ್ಸಸ್ "ಟೀನ್") ನಿಮ್ಮ ಮಗುವಿನೊಂದಿಗೆ ಮಾತನಾಡಿ ಮತ್ತು ಈ ನಿರ್ಬಂಧಗಳನ್ನು ವಿವಿಧ ವಯೋಮಾನ ಗುಂಪುಗಳ ಪ್ರಕಾರ ಏಕೆ ವಿಂಗಡಿಸಲಾಗಿದೆ ಎಂಬುದನ್ನು ವಿವರಿಸಿ ಮತ್ತು ಅವರಿಗೆ ಯಾವ ರೀತಿಯ ಕಂಟೆಂಟ್ ಸೂಕ್ತ ಎಂದು ನೀವು ಭಾವಿಸುತ್ತೀರಿ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿ.

### ಆ್ಯಪ್ ಚಟುವಟಿಕೆ ವರದಿಗಳು

ಮಕ್ಕಳು ತಮ್ಮ ಸಾಧನಗಳೊಂದಿಗೆ ಏನೇನು ಮಾಡಲು ಬಯಸುತ್ತಾರೆ ಎಂಬುದು ನಿಮಗೆ ತಿಳಿದಿದ್ದರೆ, ತಂತ್ರಜ್ಞಾನದ ಕುರಿತು ನಿಮ್ಮ ಮಕ್ಕಳೊಂದಿಗೆ ಮಾತನಾಡುವುದು ನಿಜಕ್ಕೂ ಸುಲಭ. ನಿಮ್ಮ ಮಗು ಚಾಟ್ ಮಾಡಲು ಇಷ್ಟಪಡುತ್ತಾರೆಯೇ? ಗೇಮ್ ಆಡಲು ಇಷ್ಟಪಡುತ್ತಾರೆಯೇ? ಓದುವ ಹವ್ಯಾಸ ಹೊಂದಿದ್ದಾರೆಯೇ? ನಿಮ್ಮ ಮಗು ಯಾವ ಆ್ಯಪ್‌ಗಳು ಹಾಗೂ ಗೇಮ್‌ಗಳನ್ನು ತುಂಬಾ ಆನಂದಿಸುತ್ತಾರೆ ಎಂಬ ಕುರಿತು ಅವರೊಂದಿಗೆ ಮಾತನಾಡಿ ಮತ್ತು Family Link ನ ಆ್ಯಪ್ ಚಟುವಟಿಕೆ ವರದಿಗಳನ್ನು ಬಳಸಿಕೊಂಡು ಅವರು ಅತಿ ಹೆಚ್ಚು ಸಮಯವನ್ನು ಎಲ್ಲಿ ಕಳೆಯುತ್ತಾರೆ ಎಂದು ನೋಡಿ. ನಿಮ್ಮ ಮಗುವು ಪ್ರತಿ ಆ್ಯಪ್‌ನಲ್ಲಿ ಪ್ರತಿದಿನ, ಪ್ರತಿ ವಾರ ಮತ್ತು ಪ್ರತಿ ತಿಂಗಳು ಎಷ್ಟು ಸಮಯ ಕಳೆಯುತ್ತಾರೆ ಎಂಬ ವಿಶ್ಲೇಷಣೆಯನ್ನು ಈ ವರದಿಗಳು ಒದಗಿಸುತ್ತವೆ.

### ಆ್ಯಪ್‌ಗಳನ್ನು ಮರೆಮಾಡಿ

ನಿಮ್ಮ ಮಗು ಏನನ್ನು ವೀಕ್ಷಿಸುತ್ತಿದ್ದಾರೆ, ಆಡುತ್ತಿದ್ದಾರೆ ಮತ್ತು ಕಲಿಯುತ್ತಿದ್ದಾರೆ ಎಂಬುದನ್ನು ಆಧರಿಸಿ, ನಿಮ್ಮ ಮಗುವಿಗೆ ಸೂಕ್ತವಾದ ವೀಕ್ಷಣೆ ಅವಧಿಯನ್ನು ನೀವು ನಿರ್ಧರಿಸಬಹುದು. ಚಟುವಟಿಕೆ ವರದಿಯ ಪ್ರಕಾರ ನಿಮ್ಮ ಮಗು ಒಂದು ಆ್ಯಪ್ ಅನ್ನು ತೀರಾ ಹೆಚ್ಚು ಬಳಸುತ್ತಿದೆ (ಉದಾಹರಣೆಗೆ, ಅವರ ಮೆಚ್ಚಿನ ಹೊಸ ಗೇಮ್), ಎಂದು ಕಂಡುಬಂದರೆ, ನೀವು ಆ ಆ್ಯಪ್ ಅನ್ನು ಅವರ ಸಾಧನದಿಂದ ತಾತ್ಕಾಲಿಕವಾಗಿ ಮರೆಮಾಡಬಹುದು. ತಾವು ಆ್ಯಪ್ ಅನ್ನು ಬಳಕೆ ಮಾಡುತ್ತಿರುವ ಸಮಯಾವಧಿಯು ಆರೋಗ್ಯಪೂರ್ಣವಾಗಿದೆ ಎಂದು ನಿಮ್ಮ ಮಗುವಿಗೆ ಅನಿಸುತ್ತದೆಯೇ, ಇಲ್ಲವೇ ಎಂಬ ಬಗ್ಗೆ ಅವರೊಂದಿಗೆ ಚರ್ಚಿಸಿ ಮತ್ತು ಅವರು ವಿರಾಮ ತೆಗೆದುಕೊಳ್ಳಬೇಕೆಂದು ನೀವು ಏಕೆ ಹೇಳುತ್ತಿರುವಿರಿ ಎಂಬುದನ್ನು ವಿವರಿಸಿ. ಅವರ ಆ್ಯಪ್ ಇತಿಹಾಸದಿಂದ ಏನನ್ನೂ (ಅಂದರೆ ಗೇಮ್‌ನಲ್ಲಿ ಪ್ರಗತಿ ಅಥವಾ ಅಧಿಕ ಅಂಕಗಳು) ಅಳಿಸಲಾಗುವುದಿಲ್ಲ - ನಿಮ್ಮ ಮಗುವಿಗೆ ಆ್ಯಪ್ ಅನ್ನು ಮತ್ತೆ ಲಭ್ಯಗೊಳಿಸಲು ನೀವು ನಿರ್ಧರಿಸುವವರೆಗೆ ಅದನ್ನು ಮರೆಮಾಡಲಾಗುತ್ತದೆ, ಅಷ್ಟೇ.

ನಿಮ್ಮ ಮಕ್ಕಳೊಂದಿಗೆ ಆ್ಯಪ್‌ಗಳ ಕುರಿತು ಚರ್ಚಿಸುವಾಗ, ಅವರು ಯಾವ ಆ್ಯಪ್‌ಗಳು ಹಾಗೂ ಗೇಮ್‌ಗಳನ್ನು ಅತ್ಯಂತ ಆನಂದಿಸುತ್ತಾರೆ ಎಂಬ ಕುರಿತು ಮಾತನಾಡಿ. ಅವರಿಗೆ ಯಾವುದರಲ್ಲಿ ಆಸಕ್ತಿಯಿದೆ ಎಂಬುದನ್ನು ತಿಳಿದುಕೊಳ್ಳುವುದು ಮಾತ್ರವಲ್ಲದೆ, ಶಾಲೆ, ಕೆಲಸ ಅಥವಾ ಹೊರಗಡೆ ಆಟವಾಡುವಂತಹ ವಿಷಯಗಳೊಂದಿಗೆ ಅವರು ಈ ಆ್ಯಪ್‌ಗಳ ಬಳಕೆಯನ್ನು ಸೂಕ್ತವಾಗಿ ಸಮತೋಲನಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದೆ.

## ವೀಕ್ಷಣೆಯ ಅವಧಿಯ ಮೇಲೆ ಒಂದು ಕಣ್ಣಿಡಿ

ತಮ್ಮ ಸಾಧನವನ್ನು ಬಳಸುತ್ತಾ ಮಕ್ಕಳು ಎಷ್ಟು ಸಮಯ ಕಳೆಯಬೇಕು ಎಂಬ ನಿರ್ಧಾರ ನಿಮಗೆ ಬಿಟ್ಟ ವಿಷಯವಾಗಿದೆ, ಆದರೆ ಈ ಮಿತಿಗಳನ್ನು ಸೆಟ್ ಮಾಡಲು Family Link ನಲ್ಲಿ ಕೆಲವು ವಿಧಾನಗಳಿವೆ.

### ವೀಕ್ಷಣೆ ಅವಧಿಯ ಮಿತಿಗಳು

ನಿಮ್ಮ ಮಗುವಿನ Android ಸಾಧನಕ್ಕಾಗಿ ನೀವು Family Link ಮೂಲಕ ದೈನಂದಿನ ವೀಕ್ಷಣೆ ಅವಧಿಯ ಅನುಮತಿಗಳನ್ನು ಸೆಟ್ ಮಾಡಬಹುದು. ನಿಮ್ಮ ಮಗುವಿನೊಂದಿಗೆ ಒಂದಿಷ್ಟು ಮಾತನಾಡಿ, ಪ್ರತಿ ದಿನ ಸಾಧನಗಳನ್ನು ಎಷ್ಟು ಹೊತ್ತು ಬಳಸುವುದು ಸೂಕ್ತ ಎಂಬ ಕುರಿತು ಚರ್ಚಿಸಲು ಮತ್ತು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಸೂಕ್ತವಾಗುವ ಮಿತಿಗಳಿಗೆ ಸಮ್ಮತಿಸಲು ಇದೊಂದು ಸದವಕಾಶವಾಗಿದೆ. ವೀಕ್ಷಣೆಗೆ ಎಷ್ಟು ಸಮಯ ಲಭ್ಯವಿದೆ ಎಂಬುದನ್ನು ತಂದೆ-ತಾಯಿ ಮತ್ತು ಮಕ್ಕಳು ನೋಡಬಹುದು, ಇದರಿಂದಾಗಿ ತಮ್ಮ ಮಕ್ಕಳ ತಂತ್ರಜ್ಞಾನ ಬಳಕೆಯನ್ನು ಸಕ್ರಿಯವಾಗಿ ನಿರ್ವಹಿಸಲು ತಂದೆ-ತಾಯಿಗೆ ಸಾಧ್ಯವಾಗುತ್ತದೆ, ಅಥವಾ ಮಕ್ಕಳೇ ಮುಂದುವರೆದು ಇದನ್ನು ನಿರ್ವಹಿಸಲು ಸಹ ಸಾಧ್ಯವಾಗುತ್ತದೆ.

### ಮಲಗುವ ಸಮಯವನ್ನು ಸೆಟ್ ಮಾಡಿ

ಮಲಗುವ ಸಮಯವಾದಾಗ, ಮಕ್ಕಳ ಗಮನ ಅತ್ತಿತ್ತ ಹರಿಯದ ಹಾಗೆ ಎಚ್ಚರವಹಿಸಿ, ರಾತ್ರಿಯ ಹೊತ್ತು ಉತ್ತಮ ನಿದ್ದೆ ಸಿಗುವಂತೆ ನೋಡಿಕೊಳ್ಳುವುದು ಮುಖ್ಯವಾಗಿದೆ. ತಮ್ಮ ಮಗು ಮಲಗಬೇಕಾದ ಸಮಯದಲ್ಲಿ, ತಂದೆ-ತಾಯಿಯು Family Link ಬಳಸಿಕೊಂಡು ಸಾಧನ "ಮಲಗುವ ಸಮಯವನ್ನು" ಸೆಟ್ ಮಾಡಬಹುದು. ಫುಟ್‌ಬಾಲ್ ಫೀಲ್ಡ್‌ನಲ್ಲಿ ತಮ್ಮ ಅತ್ಯುತ್ತಮ ಪ್ರದರ್ಶನ ನೀಡಲು ಚೈತನ್ಯ ಹೊಂದಿರುವುದರಿಂದ ಪ್ರಾರಂಭಿಸಿ, ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸುವುದಕ್ಕಾಗಿ ಗಮನ ಕೇಂದ್ರೀಕರಿಸುವವರೆಗೆ, ಮಲಗುವ ಸಮಯದಲ್ಲಿ ಸಾಧನ-ಮುಕ್ತವಾಗಿರುವುದರ ಮಾನಸಿಕ ಹಾಗೂ ದೈಹಿಕ ಪ್ರಯೋಜನಗಳನ್ನು ಮಕ್ಕಳು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ. ನೀವು ಮಲಗಲು ಸಿದ್ಧರಾಗುವಾಗಲೂ ಸಹ, ನಿಮ್ಮದೇ ಸಾಧನಗಳಿಂದ "ಕೂಲ್ ಆಫ್" ಆಗಲು ಏಕೆ ಪ್ರಯತ್ನಿಸುತ್ತೀರಿ ಎಂಬುದನ್ನು ನಿಮ್ಮ ಮಗುವಿಗೆ ವಿವರಿಸಲು ಇದನ್ನು ಒಂದು ಅವಕಾಶವನ್ನಾಗಿ ಬಳಸಿಕೊಳ್ಳಬಹುದು.

### ಮಗುವಿನ ಸಾಧನವನ್ನು ದೂರದಿಂದಲೇ ಲಾಕ್ ಮಾಡಿ

ಹೋಂವರ್ಕ್ ಮಾಡುವ ಸಮಯವಾದಾಗ ಅಥವಾ ಮನೆಮಂದಿಯೊಂದಿಗೆ ರಾತ್ರಿ ಊಟ ಮಾಡುವ ಸಮಯವಾದಾಗ, Family Link ಆ್ಯಪ್ ಮೂಲಕ ತಂದೆ-ತಾಯಿ ತಮ್ಮ ಮಗುವಿನ ಸಾಧನವನ್ನು ಲಾಕ್ ಮಾಡಲು ಸಾಧ್ಯವಾಗುತ್ತದೆ. ಸಾಧನಗಳನ್ನು ಯಾವಾಗ ಬಳಸಿದರೆ ತೊಂದರೆಯಿಲ್ಲ, ಮತ್ತು ಅವು ಯಾವಾಗ ಆಫ್ ಆಗಿರಬೇಕು ಮತ್ತು ತಮ್ಮಿಂದ ದೂರವಿರಬೇಕು ಎಂಬ ಬಗ್ಗೆ ಒಂದು ಕುಟುಂಬವಾಗಿ ಚರ್ಚಿಸಲು ಮತ್ತು ನಿರ್ಧರಿಸಲು ಇದು ಒಳ್ಳೆಯ ಅವಕಾಶವಾಗಿದೆ. ಒಂದು ಸಾಧನವನ್ನು ದೂರದಿಂದಲೇ, ರಿಯಲ್-ಟೈಮ್‌ನಲ್ಲಿ ಲಾಕ್ ಮಾಡಲು ಸಾಧ್ಯವಾಗುವುದರಿಂದ ತಂದೆ-ತಾಯಿಗೆ ತಮ್ಮ ಕ್ರಿಯೆಗಳ ಕುರಿತು ವಿವರಿಸಲು ಮತ್ತು ಕೌಟುಂಬಿಕ ನಿರ್ಧಾರಗಳನ್ನು ಬಲಪಡಿಸಲು ಅವಕಾಶ ಸಿಗುತ್ತದೆ, ಇದರಿಂದಾಗಿ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಒಟ್ಟೊಟ್ಟಿಗೆ ನೆರವೇರುತ್ತದೆ.

## ಅವರು ಎಲ್ಲಿದ್ದಾರೆ ಎಂದು ನೋಡಿ

ನಿಮಗೆ ಬೆಳೆದ ಮಕ್ಕಳು ಅಥವಾ ಹದಿಹರೆಯದ ವಯಸ್ಸಿನ ಮಕ್ಕಳಿದ್ದರೆ, ಬಹುಶಃ ನೀವು ಹಜಾರದಲ್ಲಿ ನಿಂತು, "ನನ್ನ ಮಗ ಎಲ್ಲಿದ್ದಾನೆ/ನನ್ನ ಮಗಳು ಎಲ್ಲಿದ್ದಾಳೆ?" ಎಂದು ನಿಮಗೆ ನೀವೇ ಕೇಳಿಕೊಂಡ ಅನುಭವವಾಗಿರಬಹುದು. ಸಾಮಾನ್ಯವಾಗಿ, ಅವರು ತಮ್ಮ ರೂಮಿನಲ್ಲಿ ಶಾಂತವಾಗಿರುತ್ತಾರೆ ಅಥವಾ ಅವರು ರಸ್ತೆಯಾಚೆ ತಮ್ಮ ಸ್ನೇಹಿತರೊಂದಿಗೆ ಇದ್ದಾರೆ ಎಂಬುದನ್ನು ನೀವು ಮರೆತುಬಿಟ್ಟಿರುತ್ತೀರಿ. ಆದರೂ, ತಮ್ಮ ಸಾಧನವನ್ನು ಅವರು ಜೊತೆಯಲ್ಲಿ ಒಯ್ದಿದ್ದಾರೆಯೇ ಮತ್ತು ಅದು ಆನ್ ಆಗಿದೆಯೇ ಎಂಬುದನ್ನು ತಿಳಿದುಕೊಳ್ಳುವುದು ಒಳ್ಳೆಯದು, ನಿಮ್ಮ ಮಗುವನ್ನು ಹುಡುಕಲು ನೀವು Family Link ಬಳಸಬಹುದು.

**ಸಾಧನದ ಸ್ಥಳವನ್ನು ಆನ್ ಮಾಡಿ**
ನಿಮ್ಮ ಮಗುವಿನ ಸ್ಥಳವನ್ನು ನೀವು ತಿಳಿದುಕೊಳ್ಳುವುದು ಏಕೆ ಉಪಯುಕ್ತವಾಗಿರುತ್ತದೆ ಎಂಬ ಬಗ್ಗೆ ನಿಮ್ಮ ಮಕ್ಕಳೊಂದಿಗೆ ಮಾತನಾಡಿ.

**ನಿಮ್ಮ ಮಗು ಬೆಳೆದ ಹಾಗೆ ಸೆಟ್ಟಿಂಗ್‌ಗಳನ್ನು ಹೊಂದಾಣಿಕೆ ಮಾಡಿ**
ನಿಮ್ಮ ಮಗು ಬೆಳೆದ ಹಾಗೆ, ನೀವು ಅವರ ಖಾತೆ ಹಾಗೂ ಸಾಧನದ ಹಲವಾರು ಸೆಟ್ಟಿಂಗ್‌ಗಳನ್ನು Family Link ನಿಂದ ಬದಲಾಯಿಸಬಹುದು. ಈ ಬದಲಾವಣೆಗಳ ಕುರಿತು ನಿಮ್ಮ ಮಗುವಿನೊಂದಿಗೆ ಮಾತನಾಡಿ, ಮತ್ತು ಭವಿಷ್ಯದಲ್ಲಿ ಅವರು ತಮ್ಮದೇ ಖಾತೆಗಳನ್ನು ಹಾಗೂ ಸಾಧನವನ್ನು ನಿರ್ವಹಿಸಲು ಸಿದ್ಧರಾಗಲು ಇವು ಹೇಗೆ ಸಹಾಯ ಮಾಡುತ್ತವೆ ಎಂಬ ಕುರಿತು ಮಾತನಾಡಿ.

## ಕೌಟುಂಬಿಕ ಬದ್ಧತೆಯನ್ನು ನಿರ್ಮಿಸಿ

ನಿಮ್ಮ ಮಗು ಅನ್ವೇಷಿಸುವಾಗ ಅದರ ಜಾಡು ಇರಿಸಿಕೊಳ್ಳಲು Family Link ಸಹಾಯ ಮಾಡುತ್ತದೆಯಾದರೂ, ನಿಮ್ಮ ಮಕ್ಕಳು ಆನ್‌ಲೈನ್‌ನಲ್ಲಿ ಸ್ಮಾರ್ಟ್ ಆಗಿರಲು ಮತ್ತು ಆತ್ಮವಿಶ್ವಾಸದಿಂದ ಅನ್ವೇಷಿಸಲು ಅವರಿಗೆ ಬೇಕಾದ ಮಾಹಿತಿ ನೀಡುವುದು ಸಹ ಉಪಯುಕ್ತವಾಗಿರುತ್ತದೆ. Be Internet Awesome ಎಂಬುದು ಮಕ್ಕಳಿಗೆ ಡಿಜಿಟಲ್ ಸುರಕ್ಷತೆ ಹಾಗೂ ನಾಗರಿಕತೆಯನ್ನು ಕಲಿಸುವ ಪ್ರೋಗ್ರಾಂ ಆಗಿದೆ. Be Internet Awesome ಪ್ರಮಾಣಕ್ಕೆ ಜೊತೆಯಾಗಿ ಸಹಿ ಹಾಕುವ ಮೂಲಕ, ಈ ವಿಷಯಗಳ ಕುರಿತು ನಿಮ್ಮ ಮಗುವಿನೊಂದಿಗೆ ಮಾತುಕತೆ ಪ್ರಾರಂಭಿಸುವುದನ್ನು ಪರಿಗಣಿಸಿ. ನಿಮ್ಮ ಮಕ್ಕಳು ಇಂಟರ್‌ಲ್ಯಾಂಡ್ ಎಂಬ ಉಚಿತ, ವೆಬ್ ಆಧಾರಿತ ಗೇಮ್ ಆಡಲು ಸಹ ನೀವು ಪ್ರೋತ್ಸಾಹಿಸಬಹುದು; ಸದೃಢ ಪಾಸ್‌ವರ್ಡ್‌ಗಳನ್ನು ರಚಿಸುವುದು, ಆನ್‌ಲೈನ್‌ನಲ್ಲಿ ಕರುಣಾಳು ಆಗಿರುವುದು, ಫಿಶಿಂಗ್ ಹಾಗೂ ಸ್ಕ್ಯಾಮ್‌ಗಳಿಂದ ದೂರವಿರುವುದು ಮತ್ತು ಆನ್‌ಲೈನ್‌ನಲ್ಲಿ ಜನರ ಗೌರವದ ಕುರಿತು ಕಾಳಜಿವಹಿಸುವ ವಿಷಯಗಳ ಅರಿವನ್ನು ಇದು ಬಲಪಡಿಸುತ್ತದೆ. Family Link ಆ್ಯಪ್‌ನ ಮೆನುವಿನಲ್ಲಿರುವ "ಕುಟುಂಬಗಳಿಗಾಗಿ ಸಲಹೆಗಳು" ಎಂಬಲ್ಲಿಂದ ಅವರು ನೇರವಾಗಿ ಇಂಟರ್‌ಲ್ಯಾಂಡ್‌ಗೆ ಲಿಂಕ್ ಮಾಡಬಹುದು.